# ECHO OF HIS CALL

# ಕರೆಯ ಪ್ರತಿಧ್ವನಿ

KANNADA

ECHO OF HIS CALL 1969-2019 GOLDEN JUBILEE REACHING NATIONS

*India's National Spiritual Newspaper*  ₹ 10/-

Published monthly in ENGLISH, TAMIL, MALAYALAM, TELUGU, HINDI, KANNADA, MARATHI, BENGALI, GUJARATI, ODIYA, ASSAMESE, PUNJABI, NEPALI, URDU, SINHALA & AFRIKAN

Editor : S. SAM SELVA RAJ | 16 Languages | Associate Editor : Rev. R. Rama Krishna

Vol. XXVI  YEAR OF OUR LORD JESUS CHRIST, 2024 NOVEMBER  No.10


## ಪರಿಶುದ್ಧ ಸತ್ಯವೇದ

Please memorize this portion

**Proverbs 26:1-10**

1. ಬೇಸಿಗೆಯ ಹಿಮ ಸುಗ್ಗಿಯಲ್ಲಿ ಮಳೆ ಹೇಗೋ ಮೂಢನಿಗೆ ಮಾನ ಹಾಗೆ ಸರಿಯಲ್ಲ.
2. ಕುಪ್ಪಳಿಸುತ್ತಿರುವ ಗುಬ್ಬಿಯಂತೆ, ಹಾರಾಡುವ ಬಾನಕ್ಕಿಯ ಹಾಗೆ ನಿಮಿತ್ತವಿಲ್ಲದೆ ಕೊಟ್ಟ ಶಾಪವು ಎರಗಿ ನಿಲ್ಲದು.
3. ಕುದುರೆಗೆ ಚಬುಕು, ಕತ್ತೆಗೆ ಕಡಿವಾಣ, ಮೂಢನ ಬೆನ್ನಿಗೆ ಬೆತ್ತ.
4. ಮೂಢನ ಮೂರ್ಖತನಕ್ಕೆ ಸರಿಯಾಗಿ ಉತ್ತರ ಕೊಡು; ನೀನೂ ಅವನಿಗೆ ಸಮಾನನಾದಿಯೇ.
5. ಮೂಢನ ಮೂರ್ಖತನಕ್ಕೆ ಸರಿಯಾಗಿ ಉತ್ತರಕೊಡು; ತನ್ನನ್ನು ಜ್ಞಾನಿಯೆಂದು ಎಣೆಸಿಕೊಂಡಾನು.
6. ಮೂಢನ ಮೂಲಕ ಮಾತನ್ನು ಹೇಳಿ ಕಳುಹಿಸುವವನು ತನ್ನ ಕಾಲುಗಳನ್ನು ತಾನೇ ಕಡಿದುಕೊಂಡು ಕೇಡನ್ನು ಬಗೆಯುವನು.
7. ಮೂಢನ ಬಾಯ ಜ್ಞಾನೋಕ್ತಿಯು ಜೋಲಾಡುವ ಕುಂಟಕಾಲು.
8. ಮೂಢನಿಗೆ ಕೊಡುವ ಮಾನವು ಕವಣೆಯಲ್ಲಿಟ್ಟ ಕಲ್ಲಿನ ಹಾಗೆ.
9. ಮೂಢನ ಬಾಯಿಗೆ ಸಿಕ್ಕಿದ ಮುಳ್ಳಿಯ ಗೋಲಿನ ಹಾಗೆ.
10. ಮೂಢರನ್ನು, ತಿರುಗಾಡುವವರನ್ನು ಕೂಲಿಗೆ ಕರೆಯುವವನು ಯಾರಿಗೋ ತಗಲಲಿ ಎಂದು ಬಾಣವನ್ನು ಎಸೆಯುವವನ ಹಾಗೆ.

# ಪರಸ್ಪರ ಭಾರ ಹೊರುವುದು !

*(ಗೌರವ ಮುಖ್ಯಸಂಪಾದಕರು. ಘನ ಆ್ಯಂಜಲಿನ್ ಸೆಲ್ವಕುಮಾರಿ)*



**BEAR EACH OTHER'S BURDEN!** (Galatians 6:2)

ನಮ್ಮ ಕರ್ತನು ಮತ್ತು ರಕ್ಷಕನಾದ ಯೇಸುಕ್ರಿಸ್ತನ ನಾಮದಲ್ಲಿ ನಿಮ್ಮೆಲ್ಲರಿಗೆ ಶುಭಾಶಯಗಳು. ಆತನ ಪ್ರೀತಿಗೆ ಮಿತಿಯಿಲ್ಲ. ಷರತ್ತು ಇಲ್ಲದ ಮತ್ತು ಚರ್ಚಾಸ್ಪದವಲ್ಲದ ಆತನ ದಯೆ ಮತ್ತು ಕಾಳಜಿಗಾಗಿ ನಾವು ಧನ್ಯವಾದಗಳನ್ನು ಸಲ್ಲಿಸುತ್ತೇವೆ. ಆತನು ನಮ್ಮನ್ನು 2024ರ ಮೊದಲ ಹತ್ತು ತಿಂಗಳುಗಳಲ್ಲಿ ನಮ್ಮನ್ನು ನಡೆಸಿಕೊಂಡು ಬಂದಿದ್ದಾನೆ. ಆತನು ನಿರಂತರವಾಗಿ ನಮ್ಮನ್ನು ನಡೆಸುತ್ತಾನೆ. ಆತನ ಕೃಪೆಯು ನಮಗೆ ಯಾವಾಗಲೂ ಸಾಕಾಗಿದೆ. ನಾವು ಆತನ ಮಕ್ಕಳಾಗಿದ್ದೇವೆ.

ಆತನು ನಮ್ಮನ್ನು ತನ್ನ ಮಕ್ಕಳನ್ನಾಗಿ ಕರೆಯುತ್ತಾನೆಂದು ಸತ್ಯವೇದವು ನಮಗೆ ತಿಳಿಸುತ್ತದೆ. ಎಂತಹ ಸೌಭಾಗ್ಯ! ಆದರೆ ಒಂದು ನಿರ್ಣಾಯಕ ಪ್ರಶ್ನೆ, ನಮ್ಮ ಜೀವನವು ಆತನ ಕರೆಗೆ ಯೋಗ್ಯವಾಗಿದೆಯೇ? ಅಪೋಸ್ತಲನಾದ ಪೌಲನು ತನ್ನ ಪತ್ರಿಕೆಯ ಎಫೆಸದವರಿಗೆ ಹೀಗೆ ಬರೆಯುತ್ತಾನೆ... **ನೀವು ದೇವರಿಂದ ಕರೆಯಲ್ಪಟ್ಟವರಾದ ಕಾರಣ ಯೋಗ್ಯರಾಗಿ ನಡೆದುಕೊಳ್ಳಬೇಕೆಂದು ಕರ್ತನ ಸೇವೆಯಲ್ಲಿ ಸೆರೆಯವನಾದ ನಾನು ನಿಮ್ಮನ್ನು ಪ್ರಬೋಧಿಸುತ್ತೇನೆ.** ಎಫೆಸ 4:1 ಇದರ ಅರ್ಥವೇನು? ಈ ಒಂದು ವಾಕ್ಯವು ನನ್ನ ಮನಸ್ಸಿನಲ್ಲಿ ಬಹಳ ದಿನಗಳಿಂದ ಇದೆ. ಯಾವುದಕ್ಕಾಗಿ ನಾವು ಕರೆಯಲ್ಪಟ್ಟಿದ್ದೇವೆ. ಇದಕ್ಕೆ ಅನೇಕ ಅರ್ಥಗಳು ಇವೆ. ಈ ಹೊತ್ತು ನಾವು ಒಂದನ್ನು ಕೇಂದ್ರೀಕರಿಸೋಣ.

(3ನೇ ಪುಟಕ್ಕೆ)




**Echo of His Call**

***Christian YouTube Channel!***

**An opportunity to pray with Pr. S. Sam Selva Raj!**

Message & Prayer in 5 minutes!!

**English, Hindi, Tamil & Telugu**

Every day – From 2.00 A.M.

**Tamil Sunday Service – 8.30 A.M.**

★ Please Subscribe and Share ★

# ECHO OF HIS CALL - (1969-2019 GOLDEN JUBILEE YEAR)

## from your dearly beloved brother...





**"The young lions lack and suffer hunger; But those who seek the Lord shall not lack any good thing" – Psalm 34:10**

**OUR MISSION POLICY**

We should expound and teach the contemporary generation the undiluted teachings of the ancient and early Apostles. It is the need of the hour.

HON. EDITOR-IN-CHIEF
Rev. Angeline S. Kumari, M.A., M.Sc., M.Ed.
HON. MANAGING EDITOR
Pastor Alex Samson Sam, B.Th., M.Div.
GENERAL MANAGER
Bro. N. Prakasam, M.A., M.Sc.(C&P), PGDHRM., MBA.
ADMINISTRATION
Sis. Jesy Veena Sam
Adv. K. Puratchivendan, M.Com., C.A., B.L.
Dr. P.E.R. Premchand, M.Sc., M.A., M.Ed., Ph.D.
Dr. C.G.S. Baburao, B.Tech., M.Tech. (DM), Ph.D.
Dr. Rabinder Boaz, M.S. (CMC)
EDITORIAL BOARD
Dr. Serena Bevin, M.A., M.Phil., B.Ed.
Sis. Sajini Cherian
Rev. Dr. K.R. Rajasekaran
Rev. Dr. William Robert, Ph.D., DD, D.Lit.

EDITOR, PUBLISHER & PRINTER
Pastor S. SAM SELVA RAJ
Echo of His Call Printers
10, Mohammed Abdullah 2nd Street,
Chepauk, Chennai- 600 005, India.
Phone : (+ 91- 44) 2852 8282, 2852 9293, 2854 7766
Cell : (+91) 98410 71852, 98412 71858
95661 31858
E.MAIL
sam@echoofhiscall.org
biblecor@yahoo.co.in
WEBSITES
www.echoofhiscall.org
www.stpaulsmatriculation.com
YOUTUBE CHANNEL
Echo of His Call

ಕ್ರಿಸ್ತನಲ್ಲಿ ಪ್ರೀತಿಯ ದೇವರ ಮಕ್ಕಳೇ,

ನಿಮ್ಮ ಉತ್ತಮ ಜೀವನವು ಇನ್ನಷ್ಟು ಸಮೃದ್ಧಿಯಾಗಲಿ ಎಂದು ನಾವು ಸಭೆಯ ಕಡೆಯಿಂದ ನಿಮಗೆ ಅಭಿನಂದನೆ ಸಲ್ಲಿಸುತ್ತೇವೆ.

ಆತನ **ಕರೆಯ ಸೇವೆ**ಗಳ ನಮ್ಮ ಜೊತೆ ಕೆಲಸಗಾರರಿಗಾಗಿ ನಾವು ಕರ್ತನಿಗೆ ತುಂಬಾ ಧನ್ಯವಾದಗಳನ್ನು ಹೇಳುತ್ತೇವೆ. ಅನೇಕ ಅಡೆತಡೆಗಳು, ಅನಾರೋಗ್ಯ ಇದ್ದಾಗಲೂ ಮತ್ತು ಆರ್ಥಿಕ ಮುಗ್ಗಟ್ಟುಗಳು ಕೆಲವು ಪ್ರದೇಶಗಳಲ್ಲಿ ನಮ್ಮ ಪರವಾಗಿ ಇಲ್ಲವಾಗಿವೆ. ದೇವರು ನಮ್ಮ ಸಂರಕ್ಷಣೆಯನ್ನು ಮಾಡುತ್ತಾ ಮತ್ತು ನಡೆಸುತ್ತಾ ಇದ್ದಾನೆ. ಅಪೋಸ್ತಲನಾದ ಪೌಲನು ಹೇಳಿದ ಹಾಗೆ, **ಯಾವುದೇ ಜೀವನ ನಷ್ಟವಿಲ್ಲ, ಕೇವಲ ಹಡಗು ಮಾತ್ರ** (ಅಪೋಸ್ತ 27:22).

ನಮ್ಮ ಅನಾರೋಗ್ಯದ ಕಾರಣದಿಂದ ನಾವು ಕೆಲವು ಪ್ರಾದೇಶಿಕ ಯಾತ್ರೆಗಳ ಸೇವೆಯನ್ನು ಮಾಡಲಿಕ್ಕೆ ಆಗಲಿಲ್ಲ. ಏನೇ ಆಗಲಿ, ದೇವರು ತನ್ನ ವಾಕ್ಯದ ಪ್ರಕಾರ ನಮ್ಮನ್ನು ಮೇಲೆತ್ತಿದ್ದಾನೆ. **ಶಿಷ್ಟನು ಏಳು ಸಾರಿ ಬಿದ್ದರೂ ಮತ್ತೆ ಏಳುವನು.** ಜ್ಞಾನೋಕ್ತಿ 24:16. ಆದ್ದರಿಂದ ನವೆಂಬರ್ ತಿಂಗಳು ಅಶೀರ್ವಾದಗಳಿಂದ ತುಂಬಿರುತ್ತದೆ ಎಂದು ನಾವು ತುಂಬಾ ಭರವಸೆ ಹೊಂದಿದ್ದೇವೆ.

ನಮ್ಮ ಸಹೋದ್ಯೋಗಿಗಳಿಗಾಗಿ ನಿಮ್ಮ ಪ್ರಾರ್ಥನೆಗಳನ್ನು ನಾವು ಬಯಸುತ್ತೇವೆ. ಸಹೋದರಿಯರಾದ ಸೆರಿನಾ ಬೆವಿನ್, ಸಜಿನಾ ಚೆರಿಯನ್, ಘನ. ಡಾ. ಕೆ. ಆರ್. ರಾಜಶೇಖರನ್, ಘನ. ಡಾ. ವಿಲಿಯಂ ರಾಬರ್ಟ್ ಮ್ಯಾಕ್ವಿಲಿನ್. ಇನ್ನೂ ಬೇರೆ 16 ಭಾಷೆಗಳ ಸಹ ಸಂಪಾದಕರಿಗಾಗಿ, 16 ಭಾಷೆಗಳ ಜೊತೆಗಾರರಿಗಾಗಿ, 16 ಭಾಷೆಗಳ ಸಂಯೋಜಕರಿಗಾಗಿ, ಕಛೇರಿ ಸಿಬ್ಬಂದಿಗಳು, ಸಹಾಯಕರು ಮತ್ತು ನಮ್ಮ ಮುದ್ರಣಾಲಯದ ಸಿಬ್ಬಂದಿ ವರ್ಗ, ಪ್ರತಿ ತಿಂಗಳು ಆತನ **ಕರೆಯ ಪತ್ರಿಕೆ**ಯಲ್ಲಿ ಸಹಾಯ ಮಾಡುವವರಿಗೆ. ಈ ಜನರ ಯೋಗಕ್ಷೇಮದ ಕಾರಣದಿಂದಾಗಿಯೇ ನಾವು ನಿಯಮಿತವಾಗಿ ಪತ್ರಿಕೆಯನ್ನು ಪ್ರಕಟಿಸುತ್ತಾ ಇದ್ದೇವೆ. ಆರ್ಥಿಕ ಬಿಕ್ಕಟ್ಟಿನ ಕಾರಣದಿಂದಾಗಿ 2025ರ ಕ್ಯಾಲೆಂಡರ್ ಅನ್ನು ತಯಾರಿಸಲು ಮತ್ತು ಕಳುಹಿಸಲು ನಮಗೆ ಸಾಧ್ಯವಾಗುತ್ತಿಲ್ಲ. ಇದಕ್ಕಾಗಿ ನಾವು ನಿಮ್ಮಲ್ಲಿ ಕ್ಷಮಾಪಣೆಯನ್ನು ಕೇಳುತ್ತೇವೆ.

ನಮ್ಮ ಸಭೆಗಳಲ್ಲಿ ಸೇವೆಯನ್ನು ಮಾಡುವ ನಮ್ಮ ದೇವರ ಮಕ್ಕಳನ್ನು, **ನೆಹಮೀಯ ಸತ್ಯವೇದ ಕಾಲೇಜ್, ಸಂತ ಪೌಲ ಮೆಟ್ರಿಕ್ಯುಲೇಷನ್ ಶಾಲೆ,** ಮುದ್ರಣಾಲಯ, ಸಮೂಹ ಮಾಧ್ಯಮ ಸೇವೆ (ಯುಟ್ಯೂಬ್) ಮತ್ತು ಕಛೇರಿ, ನಿಮ್ಮ ಮೌಲ್ಯವುಳ್ಳ ಪ್ರಾರ್ಥನೆಗಳಲ್ಲಿ ದಯಮಾಡಿ ಜ್ಞಾಪಕ ಮಾಡಿಕೊಳ್ಳಿರಿ.

ವಿಶೇಷವಾಗಿ, ನಮ್ಮ ಸೇವೆಯು ಬಹಳ ಆರ್ಥಿಕ ಬಿಕ್ಕಟ್ಟಿನಿಂದ ಸಾಗುತ್ತಿದೆ ಎಂಬುದನ್ನು ನಾವು ನಿಮಗೆ ತಿಳಿಸುತ್ತಾ ಇದ್ದೇವೆ. ನಮ್ಮ ಅಗತ್ಯತೆಗಳನ್ನು ಪೂರೈಸುವುದಕ್ಕಾಗಿ ನಮಗೆ ಆಗುತ್ತಾ ಇಲ್ಲ. ಅದಕ್ಕಾಗಿ ದಯಮಾಡಿ ಪ್ರಾರ್ಥಿಸಿರಿ. ಆತನ **ಕರೆಯ ಸೇವೆ**ಗಳ ಎಲ್ಲಾ ಪ್ರಾರ್ಥನೆ ಸಹಭಾಗಿಗಳಿಗೆ ಮತ್ತು ಚಂದದಾರರಿಗೆ ನಮ್ಮ ಶುಭಾಶಯಗಳನ್ನು ತಿಳಿಸುತ್ತೇವೆ. ನೀವೆಲ್ಲರೂ ಅತ್ಯಧಿಕವಾಗಿ ಆಶೀರ್ವಾದಗಳನ್ನು ಹೊಂದಿರಿ.

**ಇಂತಿ ನಿಮ್ಮ ಕ್ರಿಸ್ತಯೇಸುವಿನಲ್ಲಿ ಸೇವಕರುಗಳು,**

**ಪಾ. ಅಲೆಕ್ಸ್ ಸ್ಯಾಮಸನ್ ಸ್ಯಾಮ್**

**ಪಾ. ಎಸ್. ಸ್ಯಾಮ್ ಸೆಲ್ವರಾಜ್**

(+91) 98412 71858 / 98410 71858, E.mail : sam@echoofhiscall.org

Our Ministries: ECHO OF HIS CALL Monthly Magazines (16 languages) ◌ BIBLECOR - Postal Courses (3 languages) ◌ YouTube Ministry ◌ Online Courses ◌ Theological Correspondence Courses (2 languages) ◌ Church Planting ◌ Nehemiah Bible Colleges ◌ Gospel Printing Press ◌ Great Commission Partners ◌ St. Paul's Matriculation School ◌ Crusades ◌ Community Development

**For Your Kind Attention!**

Our 5 minute **Echo of His Call** YouTube messages are being broadcasted from 2.00 A.M. in Tamil, Telugu, English and Hindi (everyday). You can receive the Grace of God by watching the messages.

Moreover, save my mobile numbers (+91) 98410 71858, (+91) 98412 71858 (personal) in your mobile phones.

- Pr. S. Sam Selva Raj

*(1ನೇ ಪುಟದಿಂದ)*

**ಸಮಾಧಾನ ಪಡಿಸುವವರು : ದೇವರ ಮಕ್ಕಳು**

ಮತ್ತಾಯ 5:9ನ್ನು ಪ್ರತಿಬಿಂಬಿಸೋಣ. **ಸಮಾಧಾನ ಪಡಿಸುವವರು ಧನ್ಯರು; ಅವರು ದೇವರ ಮಕ್ಕಳು ಅನ್ನಿಸಿಕೊಳ್ಳುವರು.** ಪ್ರೀತಿಯ ಸಹೋದರ ಮತ್ತು ಸಹೋದರಿಯರೇ, ನೀವು ದೇವರ ಮಕ್ಕಳು ಆಗಬೇಕೆಂದು ಬಯಸಿದರೆ, ಆತನ ಕರೆಗೆ ಯೋಗ್ಯರಾಗಿ ನಡೆದುಕೊಳ್ಳಬೇಕಾದರೆ, ನಾವು ಸಮಾಧಾನಿಗಳಾಗಬೇಕು. ಇದು ಮುಖ್ಯವಾದ ಗುಣವಾಗಿದೆ. ದೇವರ ಮಕ್ಕಳು ಅಗುವುದಕ್ಕೆ. ಆತನು ನಮ್ಮನ್ನು ಸಮಾಧಾನ ಪಡಿಸುವವರಾಗಿರಬೇಕೆಂದು ಕರೆದಿದ್ದಾನೆ. ಆದರೆ ತೊಂದರೆ ಮಾಡುವವರು ಆಗಬಾರದು.

ಎಫೆಸ 4:2 ಹೇಳುತ್ತದೆ - ದೇವರ ಮಕ್ಕಳಾದ ನಾವು ಸಮಾಧಾನಪಡಿಸುವವರಾಗಿ **ಪರಸ್ಪರ ಭಾರವನ್ನು ಹೊರಬೇಕೆಂದು ಕರೆಯಲ್ಪಟ್ಟಿದ್ದೇವೆ.** ಇದನ್ನು ಮಾಡಬೇಕೆಂದರೆ ನಾವು ನಮ್ರವುಳ್ಳವ ರಾಗಿರಬೇಕು. ಕರುಣೆ ಮತ್ತು ತಾಳ್ಮೆ ಈ ಸದ್ಗುಣಗಳನ್ನು ನಮ್ಮ ನಂಬಿಕೆಯನ್ನು ಹಂಚಿಕೊಳ್ಳುವ ಜೊತೆ ವಿಶ್ವಾಸಿಗಳೊಂದಿಗೆ ಮಾತ್ರವಲ್ಲದೆ ಕಠೋರವಾದ ಮಾತುಗಳು ಮತ್ತು ನೋವುಂಟು ಮಾಡುವ ಕ್ರಿಯೆಗಳಿಂದ ನಮ್ಮ ತಾಳ್ಮೆಯನ್ನು ಪ್ರತಿದಿನ ಪರೀಕ್ಷಿಸುವವರೊಂದಿಗೆ ಅಭ್ಯಾಸ ಮಾಡುವುದು ಅತ್ಯಗತ್ಯ ಸತ್ಯವಾಗಿ, ಇದು ಬಹಳ ಕಷ್ಟಕರ ಮತ್ತು ಸವಾಲಿನದಾಗಿದೆ. ಬದುಕುವುದಕ್ಕಿಂತ ಅದರ ಬಗ್ಗೆ ಮಾತನಾಡುವುದು ತುಂಬಾ ಸುಲಭ. ಏನೇ ಆಗಲಿ, ಯೇಸುವನ್ನು ಪ್ರೀತಿಸುವವರಿಂದ ಸತ್ಯವೇದ ನಿಖರವಾಗಿ ನಿರೀಕ್ಷಿಸುವುದು ಇದನ್ನೇ. ಅಪೋಸ್ತಲನಾದ ಯಾಕೋಬನು ನಮಗೆ ಒತ್ತಿ ಹೇಳುತ್ತಾನೆ. ನಾವು ಕೇವಲ ವಾಕ್ಯವನ್ನು ಕೇಳುವವರಾಗಿರದೆ ಅದರ ಪ್ರಕಾರ ನಡೆಯುವವರಾಗಿರಬೇಕು.

## ಪರಸ್ಪರರ ಭಾರಗಳನ್ನು ಹೊತ್ತುಕೊಳ್ಳುವುದು!

ಕೊಲೊಸ್ಸೆ 3:13 ನಮಗೆ ಸಲಹೆ ಕೊಡುತ್ತದೆ. **ಮತ್ತೊಬ್ಬನ ಮೇಲೆ ತಪ್ಪು ಹೊರಿಸುವುದಕ್ಕೆ ಕಾರಣವಿದ್ದರೂ ತಪ್ಪುಹೊರಿಸದೆ ಒಬ್ಬರಿ ಗೊಬ್ಬರು ಸೈರಿಸಿಕೊಂಡು ಕ್ಷಮಿಸಿರಿ. ಕರ್ತನು ನಿಮ್ಮನ್ನು ಕ್ಷಮಿಸಿದಂತೆಯೇ ನೀವೂ ಕ್ಷಮಿಸಿರಿ.**

ಪರಸ್ಪರ ಭಾರವನ್ನು ಹೊರುವುದು ಕ್ಷಮಾಪಣೆಯು ಬೇಕಾಗಿದೆ. ನಿಜವಾಗಿ ಕ್ಷಮಿಸುವುದು. ನಮಗೆ ಪ್ರೀತಿ ಬೇಕು ಮತ್ತು ದೇವರ ಪ್ರೀತಿ ಇಲ್ಲದೆ ನಾವು ಸಂಪೂರ್ಣವಾಗಿ ಕ್ಷಮಿಸುವುದು ಮತ್ತು ಮರೆಯುವುದು ಆಗುವುದಿಲ್ಲ. ಇದು ಬಹಳ ಕಷ್ಟಕರ. ನನಗೆ ಮಾಡಲಿಕ್ಕೆ ಆಗುವುದಿಲ್ಲ, ನಾನು ಮನುಷ್ಯನು ಮತ್ತು ನಮ್ಮ ಮನೋಭಾವನೆಗಳಿಂದ ಪ್ರೀತಿ ಮಾಡುವುದಕ್ಕೆ ಮತ್ತು ಮರೆಯುವುದಕ್ಕೆ ಪ್ರಾಮುಖ್ಯವಾಗಿ ನಮಗೆ ದೇವರ ಸಹಾಯವು ಬೇಕಾಗಿದೆ. ಪರಸ್ಪರ ಭಾರವನ್ನು ಹಂಚಿಕೊಳ್ಳುವುದು ಕೇವಲ ಒಂದು ಸಲಹೆ ಅಲ್ಲ ಅಥವಾ ಆಯ್ಕೆ ಅಲ್ಲ. ಇದು ಆಜ್ಞೆಯಾಗಿದೆ. ಗಲಾತ್ಯ 6:2 ಈ ರೀತಿಯಾಗಿ ಹೇಳುತ್ತದೆ. **ಒಬ್ಬರು ಮತ್ತೊಬ್ಬರ ಭಾರವನ್ನು ಹೊತ್ತುಕೊಳ್ಳಲಿ. ಹೀಗೆ ಕ್ರಿಸ್ತನ ನಿಯಮವನ್ನು ನೆರವೇರಿಸಿರಿ.**

ಕ್ರಿಸ್ತನ ನಿಯಮವನ್ನು ಅನುಸರಿಸಬೇಕಾದರೆ ನಾವು ಮತ್ತೊಬ್ಬರ ಭಾರವನ್ನು ಹೊರುವುದಕ್ಕೆ ಸಹಾಯ ಮಾಡಬೇಕು. ಪ್ರತಿಯೊಬ್ಬ ವ್ಯಕ್ತಿಯು ಕಷ್ಟಗಳನ್ನು ಮತ್ತು ಸವಾಲುಗಳನ್ನು ಎದುರಿಸುತ್ತಾ ಇದ್ದಾರೆ. ಮಿತಿಮೀರಿದ ಸನ್ನಿವೇಶಗಳು, ಆರ್ಥಿಕ ಮುಗ್ಗಟ್ಟುಗಳು, ಪಾಪದೊಂದಿಗೆ ಹೋರಾಟ, ದೈಹಿಕ ಮತ್ತು ಆತ್ಮೀಕ ಶೋಧನೆಗಳು. ಆದಾಗ್ಯೂ ನಾವು ಒಬ್ಬರೇ ಭಾರವನ್ನು ಹೊತ್ತುಕೊಳ್ಳುವುದು ಅಲ್ಲ. ಅದಕ್ಕಾಗಿ ದೇವರು ನಮಗೆ ಸಭೆಯೆಂಬ ಕುಟುಂಬವನ್ನು ಕೊಟ್ಟಿದ್ದಾನೆ. ಕ್ರಿಸ್ತನಲ್ಲಿ ನಾವು ಒಂದೇ ದೇಹವಾಗಿದ್ದೇವೆ. ದೇಹದ ಒಂದು ಭಾಗಕ್ಕೆ ಗಾಯವಾದರೆ ಇಡೀ ದೇಹವು ಕಷ್ಟವನ್ನು ಅನುಭವಿಸುತ್ತದೆ.

## ಶಿಲುಬೆಯ ಚಿಹ್ನೆ!

ನಾವು ಅನೇಕ ಸಾರಿ ದೇವರೊಂದಿಗೆ ಶಾಂತಿ ಯನ್ನು ಕಾಪಾಡಿಕೊಳ್ಳುವುದಕ್ಕೆ ಕೇಂದ್ರೀಕರಿಸುತ್ತೇವೆ. ನಮ್ಮ ಸಂಬಂಧವನ್ನು ಆತನೊಂದಿಗೆ ಮಹತ್ವವನ್ನು ಕೊಡುತ್ತೇವೆ. ಆದಾಗ್ಯೂ ಶಿಲುಬೆಯ ಚಿಹ್ನೆಯು ಎರಡು ವಿಷಯಗಳನ್ನು ಒಳಗೊಂಡಿದೆ. ಲಂಬ ರೇಖೆಯು ದೇವರೊಂದಿಗಿನ ನಮ್ಮ ಸಂಬಂಧವನ್ನು ಪ್ರತಿನಿಧಿಸುತ್ತದೆ. ಆದರೆ ಅಡ್ಡ ರೇಖೆಯು ಇತರರೊಂದಿಗೆ ನಮ್ಮ ಸಂಬಂಧವನ್ನು ಸಂಕೇತಿಸುತ್ತದೆ.

ಯೇಸು ಸ್ವಾಮಿಯ ಎರಡು ಪ್ರಾಮುಖ್ಯವಾದ ಅಜ್ಞೆಗಳು ಅದೇ ರೀತಿಯಲ್ಲಿ ಸಂಕ್ಷೇಪಿಸಲಾಗಿದೆ. **ಮೊದಲನೆಯದು ನಿನ್ನ ದೇವರಾಗಿರುವ ಕರ್ತನನ್ನು ನಿನ್ನ ಪೂರ್ಣ ಹೃದಯದಿಂದಲೂ ನಿನ್ನ ಪೂರ್ಣ ಪ್ರಾಣದಿಂದಲೂ ನಿನ್ನ ಪೂರ್ಣ ಬುದ್ಧಿಯಿಂದಲೂ ಪ್ರೀತಿಸಬೇಕು** ಎಂಬುದೇ ಮತ್ತಾಯ 22:37. ಇದು ದೇವರೊಂದಿಗಿನ ಸಂಬಂಧದ ಬಗ್ಗೆ ಮಾತನಾಡುತ್ತದೆ (ಲಂಬ ರೇಖೆ). ಎರಡನೇಯದು. **ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು** ಎಂಬುದೇ ಮತ್ತಾಯ 22:39. ಮತ್ತಾಯ 22:34-40. ನಮ್ಮ ಸಂಬಂಧವು ಇನ್ನೊಬ್ಬರೊಂದಿಗೆ (ಅಡ್ಡರೇಖೆ). ನಮ್ಮಲ್ಲಿ ಅನೇಕರು ದೇವರೊಂದಿಗಿನ ಸಂಬಂಧದ ಬಗ್ಗೆ ಸಂತೃಪ್ತಿಯಾಗುತ್ತೇವೆ. ನಾವು ಕರ್ತನನ್ನು ಪ್ರೀತಿಸುತ್ತೇವೆ, ಸತ್ಯವೇದವನ್ನು ದಿನಾಲು ಓದುತ್ತೇವೆ, ಪ್ರಾರ್ಥಿಸುತ್ತೇವೆ. ಉಪವಾಸ, ಸಭೆಗೆ ಹಾಜರಿಯಾಗುವುದು ಮತ್ತು ಸೇವೆಯಲ್ಲಿ ಭಾಗಿಯಾಗುವುದು. ಆತ್ಮ ಫಲಗಳ ಮೇಲೆ ಹೆಚ್ಚು ಒತ್ತುಕೊಡುವುದು. ಪೌಲನು ತನ್ನ ಪತ್ರಿಕೆಯಾದ 1 ಕೋರಿಂಥ 12:8-10 ಒಬ್ಬನಿಗೆ **ದೇವಾತ್ಮನ ಮೂಲಕ ಜ್ಞಾನವಾಕ್ಯವು, ಒಬ್ಬನಿಗೆ ಆ ಆತ್ಮನಿಗೆ ಅನುಗುಣವಾಗಿ ವಿದ್ಯಾವಾಕ್ಯವು ಒಬ್ಬನಿಗೆ ಆ ಆತ್ಮನಿಂದಲೇ ನಾನಾ ರೋಗಗಳನ್ನು ವಾಸಿ ಮಾಡುವ ವರವು, ಒಬ್ಬನಿಗೆ ಪ್ರವಾದನೆಯ ವರವು, ಒಬ್ಬನಿಗೆ ಸತ್ಯಾಸತ್ಯಾತ್ಮಗಳನ್ನು ವಿವೇಚಿಸುವ ವರವು, ಒಬ್ಬನಿಗೆ ವಿವಿಧ ವಾಣಿಗಳನ್ನಾಡುವ ವರವು, ಒಬ್ಬನಿಗೆ ವಾಣಿಗಳ ಅರ್ಥವನ್ನು ಹೇಳುವ ವರವು ಕೊಡಲ್ಪಡುತ್ತವೆ.**

ಆದಾಗ್ಯೂ, ಆತ್ಮಗಳ ಫಲಗಳ ಬಗ್ಗೆ ಏನು? ಗಲಾತ್ಯ 5:22,23 ನಮಗೆ ಜ್ಞಾಪಕಪಡಿಸುತ್ತದೆ. **ದೇವಾರತ್ಮನಿಂದ ಉಂಟಾಗುವ ಫಲವೇನೆಂದರೆ -ಪ್ರೀತಿ, ಸಂತೋಷ, ಸಮಾಧಾನ, ದೀರ್ಘಶಾಂತಿ, ದಯೆ, ಉಪಕಾರ, ನಂಬಿಕೆ, ಸಾಧುತ್ವ, ಶಮೆದಮೆ ಇಂಥವುಗಳೇ.** ಜನರು ತಮ್ಮ ಸೇವೆಯಲ್ಲಿ ಮತ್ತು ದೇವರೊಂದಿಗಿನ ವೈಯಕ್ತಿಕ ಸಂಬಂಧದಲ್ಲಿ ಎಷ್ಟು ತೊಡಗಿಸಿಕೊಂಡಿದ್ದಾರೆಂದರೆ, ಅವರು ತಮ್ಮ ಕುಟುಂಬಗಳು ಮತ್ತು ನೆರೆಹೊರೆಯವರನ್ನು ನಿರ್ಲಕ್ಷಿಸುತ್ತಾರೆ ಎಂದು ನಾನು ಆಗಾಗ್ಗೆ ಗಮನಿಸುತ್ತೇನೆ. ಎರಡು ಸಂಬಂಧಗಳು ಬಹಳ ಪ್ರಾಮುಖ್ಯವೆಂದು ಸತ್ಯವೇದವು ನಮಗೆ ಕಲಿಸುತ್ತದೆ.

## ಸಭೆಗಳ ಜವಾಬ್ದಾರಿಗಳು!

ಸಭೆಯು ನಿನ್ನನ್ನು ಮತ್ತು ನನ್ನನ್ನು ಒಳಗೊಂಡಿದೆ. ನಮ್ಮ ಜೊತೆ ವಿಶ್ವಾಸಿಗಳ ಹೊರೆಗಳನ್ನು ಹಂಚಿಕೊಳ್ಳಲು

ಕಾಳಜಿ ವಹಿಸುವ ಆಳವಾದ ಜವಾಬ್ದಾರಿಯನ್ನು ಹೊಂದಿದೆ. ದೇಹದ ಒಂದು ಅಂಗವು ಅಸ್ವಸ್ಥಗೊಂಡಾಗ, ಅದು ನಮ್ಮೆಲ್ಲರ ಮೇಲೆ ಪರಿಣಾಮ ಬೀರುತ್ತದೆ. ಇನ್ನೊಬ್ಬರ ಬಗ್ಗೆ ಕಾಳಜಿ ವಹಿಸುವುದು ಕೇವಲ ದಯೆಯ ಕಾರ್ಯವಲ್ಲ. ಇದರಲ್ಲಿ ವೈಯಕ್ತಿಕ ಪಾಲು ಕೂಡ ಇದೆ. ನಮ್ಮ ಸುತ್ತಮುತ್ತಲಿನವರು ಆರೋಗ್ಯ ವಾಗಿದ್ದಾಗ, ನಾವು ಪ್ರಯೋಜನ ಪಡೆಯುತ್ತೇವೆ ಮತ್ತು ನಾವು ಆರೋಗ್ಯವಾಗಿದ್ದಾಗ, ಇಡೀ ಸಭೆಯು ಬಲಗೊಳ್ಳುತ್ತದೆ. ವ್ಯತಿರಿಕ್ತವಾಗಿ ನಾವು ಬಳಲುತ್ತಿರುವಾಗ, ಸಭೆ ಸೇರಿದಂತೆ ನಮಗೆ ಹತ್ತಿರವಿರುವವರು ಸಹ ಪ್ರಭಾವಿತರಾಗುತ್ತಾರೆ.

ಗಲಾತ್ಯ 6:2 ಹೇಳುವ ಪ್ರಕಾರ, **ಒಬ್ಬರು ಮತ್ತೊಬ್ಬರ ಭಾರವನ್ನು ಹೊತ್ತುಕೊಳ್ಳಲಿ. ಹೀಗೆ ಕ್ರಿಸ್ತನ ನಿಯಮವನ್ನು ನೆರವೇರಿಸಿರಿ.** ಈ ಆಜ್ಞೆಯು ಬಹಳ ಸ್ಪಷ್ಟವಾಗಿದೆ. ಇದು ಕಡ್ಡಾಯವಲ್ಲದ್ದು ಅಲ್ಲ, ಆದರೆ ದೇವರ ಕುಟುಂಬದ ಪ್ರತಿಯೊಬ್ಬ ಸದಸ್ಯರಿಗೆ ನೇರ ನಿರ್ದೇಶನವಾಗಿದೆ. ಇದನ್ನು ಮಾಡುವುದರಿಂದ ಮಾತ್ರ ನಾವು ದೇವರ ಮಕ್ಕಳಂತೆ ನಮ್ಮ ಕರೆಗೆ ತಕ್ಕಂತೆ ಜೀವಿಸುತ್ತೇವೆ. ಬನ್ನಿ ಯಾರ್ಯಾರು ಇನ್ನೊಬ್ಬರ ಭಾರವನ್ನು ಹೊತ್ತುಕೊಂಡ ಉದಾಹರಣೆಗಳನ್ನು ದೇವರ ವಾಕ್ಯದಲ್ಲಿ ನಾವು ನೋಡೋಣ.

## ದಾವಿದ ಮತ್ತು ಯೋನಾತನ

ದಾವಿದ ಮತ್ತು ಯೋನಾತನ ನಡುವಿನ ಬಂಧನವು ನಿಸ್ವಾರ್ಥ ಪ್ರೀತಿ ಮತ್ತು ಸ್ನೇಹಕ್ಕೆ ಗಮನಾರ್ಹ ಉದಾಹರಣೆಯಾಗಿದೆ. ದಾವಿದನು ಒಂದು ದಿನ ತನ್ನ ಸ್ಥಾನವನ್ನು ಅರಸನಾಗುತ್ತಾನೆ ಎಂದು ತಿಳಿದಿದ್ದರೂ ಸಹ ಅವನು ತನ್ನದೆಂದು ನೋಡಬಹುದಾಗಿದ್ದ ಸ್ಥಾನ. ಯೋನಾತನು ದಾವಿದನನ್ನು ಮನಪೂರ್ವಕವಾಗಿ ಪ್ರೀತಿಸುತ್ತಾ ಇದ್ದನು. ದಾವಿದನಿಗೆ ಅವನ ನಿಷ್ಠೆಯು ಎಷ್ಟು ದೊಡ್ಡದಾಗಿದೆ ಎಂದರೆ ಅವನು ತನ್ನ ಸ್ವಂತ ತಂದೆ ಅರಸನಾದ ಸೌಲನ ವಿರುದ್ಧವೂ ನಿಂತನು.

1 ಸಾಮ್ಯುವೇಲ 23 ರಲ್ಲಿ ಬಹಳ ಶಕ್ತಿಯುತ ಘಟನೆಯನ್ನು ದಾಖಲಿಸುತ್ತದೆ. ಜೀಫದ ಅರಣ್ಯದಲ್ಲಿ ದಾವಿದನು ಅಡಗಿಕೊಂಡಿದ್ದಾಗ, ಸೌಲನು ಪಟ್ಟುಬಿಡದೆ ಹಿಂಬಾಲಿಸಿದನು. ಅವನನ್ನು ಕೊಲ್ಲಬೇಕೆಂದು ತೀರ್ಮಾನಿಸಿದ್ದನು. ಆದರೆ ಸತ್ಯವೇದವು ಹೇಳುತ್ತದೆ, **ದೇವರು ದಾವಿದನನ್ನು ಅವನ ಕೈಗೆ ಒಪ್ಪಿಸಲಿಲ್ಲ** 1 ಸಾಮ್ಯುವೇಲ 23:14. ದೇವರು ದಾವಿದನನ್ನು ಸಂರಕ್ಷಿಸಿದನು.

ಪ್ರೀತಿಯ ಸ್ನೇಹಿತರೇ, ಎಂತಹ ಸಂತೈಸುವ ಸತ್ಯ! ದೇವರು ದಾವಿದನನ್ನು ಸಂರಕ್ಷಿಸಿದ್ದರೆ, ಆತನು ನಮ್ಮ ಎಲ್ಲಾ ವೈರಿಗಳಿಂದ ನಮ್ಮನ್ನು ಸಹ ಸಂರಕ್ಷಿಸುತ್ತಾನೆ. ನಾವು ಬೀಳಬೇಕೆಂದು ಆಸೆಪಡುವವರಿಗೆ ಅಂತಹ ಸಮಯಗಳಲ್ಲಿ, ನಾವು ನಿರಂತರವಾಗಿ ಆಕ್ರಮಣಕ್ಕೆ ಒಳಗಾಗುತ್ತಿದ್ದೇವೆ ಎಂದು ಅನಿಸಬಹುದು. ಆದರೆ ದೇವರು ನಮ್ಮನ್ನು ನಮ್ಮ ಶತ್ರುಗಳಿಗೆ ಒಪ್ಪಿಸುವುದಿಲ್ಲ ಎಂದು ನಾವು ನೆನಪಿನಲ್ಲಿಡಬೇಕು. ನಮ್ಮ ಮಾರ್ಗಗಳು ದೇವರಿಗೆ ಸಂತೋಷ ತರುವಾಗ ನಮ್ಮ ಒಳಿತಿಗಾಗಿ ಕೆಲಸ ಮಾಡುವುದಕ್ಕೆ ನಮ್ಮ ಶತ್ರುಗಳನ್ನು ಆತನು ತಿರುಗಿಸುವನು. ಶತ್ರುಗಳು ನಿಂತು ಹೋಗುವವು. ಆದರೆ ದೇವರು ಹತೋಟಿಯಲ್ಲಿದ್ದಾನೆ. ಆತನು ಎಂದಿಗೂ ಅವರ ಕೈಯಲ್ಲಿ ನಮ್ಮನ್ನು ಬೀಳದಂತೆ ಮಾಡುವನು.

ದಾವಿದನು ಆ ಸಮಯದಲ್ಲಿ ಭಯದಿಂದ ಜೀವಿಸುತ್ತಾ ಇದ್ದನು. ಸೌಲನು ಆತನನ್ನು ಹುಡುಕುತ್ತಾ ಇದ್ದನು. ಆತನು ಏಕಾಂಗಿತನ, ಹತಾಶೆ ಮತ್ತು ಚಿಂತೆಯನ್ನು ಅನುಭವಿಸಿದನು. ತನ್ನ ಕುಟುಂಬ, ಹೆಂಡತಿಯರು, ಸ್ನೇಹಿತರು ಮತ್ತು ಅವನ ಮನೆಯ ಸೌಕರ್ಯವನ್ನು ಅರಣ್ಯದಲ್ಲಿ ಮರೆಮಾಡಲು ಬಿಟ್ಟುಹೋದ ನಂತರ. ಒಂಟಿತನವು ಅಸಾಧಾರಣ ವೈರಿಯಾಗಿರಬಹುದು. ಅದು ನಕಾರಾತ್ಮಕ ಆಲೋಚನೆಗಳನ್ನು ಬೇರು ಬಿಡಲು ಮತ್ತು ಅಭಿವೃದ್ಧಿ ಹೊಂದಲು ಅನುವು ಮಾಡಿಕೊಡುತ್ತದೆ. ಆದಾಗ್ಯೂ, ಕತ್ತಲೆಯ ಸನ್ನಿವೇಶಗಳಲ್ಲಿ,ದಾವಿದ ಸಂಗಡ ದೇವರು ಇದ್ದನು. ಆತನು ನಮ್ಮ ಸಂಗಡ ಕೂಡ ಇದ್ದಾನೆ.

ದಾವಿದನು ಯಾವಾಗ ದೈಹಿಕ, ಮಾನಸಿಕ ಮತ್ತು ಆತ್ಮೀಕವಾಗಿ ಕುಗ್ಗಿಹೋಗುವನೋ ಆತ ಅರಣ್ಯದಲ್ಲಿ ಅನಿರೀಕ್ಷಿತವಾದ ಸಂದರ್ಶಕನನ್ನು ಭೇಟಿಯಾಗುತ್ತಾನೆ. **ಸೌಲನ ಮಗನಾದ ಯೋನಾತನು ಹೋಗಿ ದೇವರಲ್ಲಿ ಅವನನ್ನು ಬಲಪಡಿಸಿದನು.** 1 ಸಾಮ್ಯುವೇಲ 23:16. ಇನ್ನೂ ಬೇರೆ ಭಾಷಾಂತರಗಳನ್ನು ನಾವು ಗಮನಿಸೋಣ.

ಎನ್ಐವಿ : **ದೇವರಲ್ಲಿ ಶಕ್ತಿಯನ್ನು ಪಡೆದುಕೊಳ್ಳುವುದಕ್ಕೆ ಸಹಾಯ ಮಾಡಿದನು.**

ಎನ್ಎಲ್ಟಿ : **ತನ್ನ ದೇವರಲ್ಲಿ ನಂಬಿಕೆಯಿಂದ ಬಲವಾಗಿ ಇದ್ದನು.**

ಕೆಜೆವಿ : **ದೇವರಲ್ಲಿ ಅವನ ಕೈಗಳನ್ನು ಬಲಪಡಿಸಿದನು.**

ಅಪ್ಲಿಫೈಡ್ : **ದೇವರಲ್ಲಿ ಅವನನ್ನು ಪ್ರೋತ್ಸಾಹಪಡಿಸಿದನು.**

ಸಂಕ್ಷಿಪ್ತವಾಗಿ, ಯೋನಾತನು ತನ್ನ ಸ್ನೇಹಿತನನ್ನು ಅರಣ್ಯದಲ್ಲಿ ಭೇಟಿಯಾಗಲು ಹೋದನು. ಅವನ ಆತ್ಮವನ್ನು ಬಲಪಡಿಸುವುದಕ್ಕೆ. ಅವನು ಪ್ರೋತ್ಸಾಹದ ಮಾತುಗಳನ್ನು ಆಡಿದನು. ಅವನ ಬಲಹೀನತೆಯನ್ನು ದಾವಿದನನ್ನು ಬಲಪಡಿಸಿದನು. ಯೋನಾತನು ಮಾನಸಿಕವಾಗಿ ದಾವಿದನಿಗೆ ಸಹಾಯ ಮಾಡುವುದಲ್ಲದೆ ದಾವಿದನು ಆಧ್ಯಾತ್ಮಿಕವಾಗಿ ಶುಷ್ಕವಾಗಿದ್ದ ಸಮಯದಲ್ಲಿ ಅವನು ದೇವರಲ್ಲಿ ಶಕ್ತಿಯನ್ನು ಕಂಡುಕೊಳ್ಳಲು ಸಹಾಯ ಮಾಡಿದನು. ಯೋನಾತನ ಮಾತುಗಳು ದಾವಿದನ ಮೇಲೆ ಅದ್ಭುತವಾಗಿ ಪರಿಣಾಮವನ್ನು ಬೀರಿದವು. 1 ಸಾಮ್ಯುವೇಲ 23:17 ಯೋನಾತನು ಹೀಗೆ ಹೇಳುತ್ತಾನೆ.

**“ಭಯಪಡಬೇಡ, ನೀನು ನನ್ನ ತಂದೆಯಾದ ಸೌಲನ ಕೈಗೆ ಸಿಕ್ಕಿಬೀಳುವುದಿಲ್ಲ; ನೀನು ಇಸ್ರಾಯೇಲ್ಯರ ಅರಸನಾಗುವಿ; ನಾನು ನಿನಗೆ ಎರಡನೆಯವನಾಗಿರುವೆನು. ಹೀಗಾಗುವುದೆಂದು ನನ್ನ ತಂದೆಯಾದ ಸೌಲನೂ ತಿಳಿದುಕೊಂಡಿದ್ದಾನೆ.**

ಯೋನಾತನು ದಾವಿದನ ತನ್ನ ಜೀವನಕ್ಕಾಗಿ ದೇವರ ಯೋಜನೆಯ ಬಗ್ಗೆ ಮರು ಭರವಸೆ ನೀಡಿದನು. ತನ್ನ ತಂದೆಯ ತಪ್ಪುಗಳನ್ನು ಒಪ್ಪಿಕೊಳ್ಳುವುದು ಯೋನಾತನಿಗೆ ಎಷ್ಟು ಕಷ್ಟಕರವಾಗಿತ್ತು ಎಂದು ಊಹಿಸಿಕೊಳ್ಳಿ. ಸೌಲನು

(6ನೇ ಪುಟಕ್ಕೆ)

NEHEMIAH RESIDENTIAL BIBLE COLLEGE Chennai.
ECHO OF HIS CALL 1969-2019 REACHING NATIONS
Rush for admission!
Diploma in Theology
Medium : Hindi
Qualification : 10th Standard & above
Recognised by International Christian Leaders & Senior Pastors for the past 55 years
Contact : The Chairman, Nehemiah Bible College.
10, MOHAMMED ABDULLAH 2ND STREET, CHEPAUK, CHENNAI - 600 005, INDIA.
Phone : (+91-44) 2852 8282, Cell : (+91) 98410 71852 / 95661 31858
E.mail : sam@echoofhiscall.org / Website : www.echoofhiscall.org
✶ ONLINE CLASSES ARE AVAILABLE ✶

GREAT COMMISSION PARTNERS

ECHO OF HIS CALL MINISTRIES
SINCE 1969

# ಪರಮಾದೇಶದಲ್ಲಿ ಪಾಲುಗಾರರು

**ಹಂಚುವುದು (ಗಲಾತ್ಯ. 6:2), ಪ್ರೋತ್ಸಾಹಿಸುವುದು (ರೋಮಾಪುರ. 12:13)**
**ತ್ವರಿತಗೊಳಿಸುವುದು (II ತಿಮೋಥಿ. 1:6)**

## ಸ್ತುತಿ ಮತ್ತು ಪ್ರಾರ್ಥನಾ ಮನವಿಗಳು

**19 ನವೆಂಬರ್ 2024 ರಿಂದ 18 ಡಿಸೆಂಬರ್ 2024 ರ ವರೆಗೆ**

**(ಈ ಹಾಳೆಯನ್ನು ಹರಿದು ನಿಮ್ಮ ಸತ್ಯವೇದದೊಳಗಿಟ್ಟು ಇವುಗಳಿಗಾಗಿ ಪ್ರಾರ್ಥಿಸಿರಿ)**



### ಈ ವಿಷಯಗಳಿಗಾಗಿ ದೇವರಿಗೆ ಸ್ತೋತ್ರವನ್ನು ಸಲ್ಲಿಸಿರಿ.

| | |
|---|---|
| ನವೆಂಬರ್ 19 | : ನಮ್ಮ **ನೆಹಮೀಯ ಸತ್ಯವೇದ ಕಾಲೇಜಿನ** 2024-25ರ ಮೊದಲನೆ ಅವಧಿಯನ್ನು ಸಫಲವಾಗಿ ಮುಗಿಸುವಂತೆ ಮತ್ತು ಎರಡನೆಯ ಅವಧಿಯನ್ನು ಪ್ರಾರಂಭಿಸುವಂತೆ ಸಹಾಯ ಮಾಡಿದಕ್ಕಾಗಿ ಆತನಿಗೆ ಸ್ತೋತ್ರವಾಗಲಿ. |
| ನವೆಂಬರ್ 20 | : ನಮ್ಮ ಮುದ್ರಣಾಲಯದಲ್ಲಿ ನಮ್ಮ ಪತ್ರಿಕೆಯನ್ನು 16 ಭಾಷೆಗಳಲ್ಲಿ ಮುದ್ರಿಸಲು ಮತ್ತು ಪ್ರಕಟಿಸಲು ಮತ್ತು ಅದನ್ನು ಸೇವಾಕ್ಷೇತ್ರಗಳಿಗೆ ವಿತರಿಸಲು ನಮಗೆ ಅನುವು ಮಾಡಿಕೊಟ್ಟಿದ್ದಾನೆ. |
| ನವೆಂಬರ್ 21 | : ನಮ್ಮ **ಬೈಬಲ್ ಕೋರ್** ಮತ್ತು ದೈವಶಾಸ್ತ್ರದ ದೂರ **ಶಿಕ್ಷಣ ಕೋರ್ಸ್**ಗಳ ಮೇಲೆ ಆತನ ಆಶೀರ್ವಾದಕ್ಕಾಗಿ. |
| ನವೆಂಬರ್ 22 | : ನಮ್ಮ ಭಾನುವಾರ ಆರಾಧನೆಗಳು, ನಮ್ಮ ಮುಖ್ಯಸಭೆ ಮತ್ತು ಶಾಖಸಭೆಗಳು ತಲುಪದೇ ಇರುವ ಸ್ಥಳಗಳಿಗೆ ಸುವಾರ್ತೆಯನ್ನು ಪ್ರಸರಿಸುವಂತೆ ಸಹಾಯ ಮಾಡಿದ್ದಕ್ಕಾಗಿ. |
| ನವೆಂಬರ್ 23 | : ವಿವಿಧ ಸೇವೆಗಳ ಮೂಲಕ ಸುವಾರ್ತೆಯನ್ನು ಪ್ರಚಾರ ಮಾಡುವ ನಮ್ಮ ಹಿರಿಯ ಸಭಾಪಾಲಕರ ಬದ್ಧತೆಯನ್ನು ನಾವು ಅಂಗೀಕರಿಸುತ್ತೇವೆ. |
| ನವೆಂಬರ್ 24 | : ಆತನ **ಕರೆಯ ಸೇವೆಯ** ಪತ್ರಿಕಾ ಸೇವೆಯ ಸಮರ್ಪಣೆಯುಳ್ಳ ಸಹ ಸಂಪಾದಕರಿಂದ ನಾವು ಆಶೀರ್ವಾದವನ್ನು ಹೊಂದಿದ್ದೇವೆ. |
| ನವೆಂಬರ್ 25 | : ಆತನ ದಯೆಯು ನಮ್ಮ ಪ್ರಾರ್ಥನಾ ಸಹಭಾಗಿಗಳಿಗೆ, ಚಂದಾ ಸಹಭಾಗಿಗಳು, ನಂಬಿಕೆಯ ಸಹಭಾಗಿಗಳು, ಜೀವನ ಸಹಭಾಗಿಗಳು, ದೊಡ್ಡ ಅಜ್ಞೆಯ ಸಹಭಾಗಿಗಳು ಮತ್ತು ಅವರ ಕುಟುಂಬಗಳ ಮೇಲೆ ಇರುವುದಕ್ಕಾಗಿ ನಾವು ದೇವರಿಗೆ ಸ್ತೋತ್ರವನ್ನು ಸಲ್ಲಿಸುತ್ತೇವೆ. |
| ನವೆಂಬರ್ 26 | : ನಮ್ಮ ನಿಯಮಿತ ಬೆಂಬಲಿಗರಿಗೆ ಮತ್ತು ಸೇವೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಿಕೆಗಾಗಿ. |
| ನವೆಂಬರ್ 27 | : ನಮ್ಮ ಸಮರ್ಪಣೆಯುಳ್ಳ ಭಾನುವಾರ ಶಾಲೆಯ ಶಿಕ್ಷಕರಿಗಾಗಿ. |
| ನವೆಂಬರ್ 28 | : ನಮ್ಮ ಆತನ **ಕರೆಯ ಸೇವೆಯ** ಯೂಟ್ಯೂಬ್ ಸೇವೆಯ ಚೇರ್ಮೆನ್‌ರಾದ ಸಹೋದರ ಎಡ್ವರ್ಡ್ ದೊರೈ. |
| ನವೆಂಬರ್ 29 | : ಆತನ **ಕರೆಯ** ಯೂಟ್ಯೂಬ್ ಮಾಧ್ಯಮ ಸೇವೆಯ ಮೂಲಕ ತಲುಪದೇ ಇರುವ ಪ್ರದೇಶಗಳಿಗೆ ಸುವಾರ್ತೆಯನ್ನು ಹರಡಲು ಕರ್ತನು ನಮಗೆ ಸಹಾಯ ಮಾಡಿದ್ದಾನೆ. |
| ನವೆಂಬರ್ 30 | : ನಮ್ಮ ಮುಖ್ಯ ಮತ್ತು ಶಾಖಸಭೆಗಳಲ್ಲಿ ಭಾನುವಾರ ಶಾಲೆಗೆ ಹೆಚ್ಚು ಮಕ್ಕಳನ್ನು ಕರೆದುಕೊಂಡು ಬಂದಿದ್ದಕ್ಕಾಗಿ. |
| ಡಿಸೆಂಬರ್ 01 | : ನಮ್ಮ **ಸಂತ ಪೌಲ ಮೆಟ್ರಿಕ್ಯುಲೇಷನ್ ಶಾಲೆ** ಮತ್ತು **ನೆಹಮೀಯ ಸತ್ಯವೇದ ಕಾಲೇಜು**ಗಳ ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗೆ ದೈವಿಕ ರಕ್ಷಣೆಯೊಂದಿಗೆ ನಮ್ಮನ್ನು ಅತನು ಆಶೀರ್ವದಿಸಿದ್ದಾನೆ. |
| ಡಿಸೆಂಬರ್ 02 | : ನಮ್ಮ ಹಿತೈಷಿಗಳಿಗಾಗಿ, ಸ್ನೇಹಿತರು ಮತ್ತು ಕ್ಷೇತ್ರದ ಸಹಾಯಕರು. |
| ಡಿಸೆಂಬರ್ 03 | : ನಮ್ಮ ಆತನ **ಕರೆಯ ಸೇವೆಯ** ಎಲ್ಲಾ ಸೇವೆಗಳ ಮೇಲೆ ಆತನ ಆಶೀರ್ವಾದ ಮತ್ತು ನಡೆಸುವಿಕೆಗಾಗಿ. |

### ದಯಮಾಡಿ ಈ ವಿಷಯಗಳಿಗಾಗಿ ಪ್ರಾರ್ಥಿಸಿರಿ.

| | |
|---|---|
| ಡಿಸೆಂಬರ್ 04 | : ನಮ್ಮ ಹಿರಿಯ ಸಭಾ ಪಾಲಕರಾದ ಸ್ಯಾಮ್ ಸೆಲ್ವರಾಜ್ ಮತ್ತು ಅವರ ಕುಟುಂಬದ ಸದಸ್ಯರಿಗಾಗಿ ಎಲ್ಲ ದುಷ್ಟಶಕ್ತಿಗಳಿಂದ ಸುರಕ್ಷತೆಗಾಗಿ. |
| ಡಿಸೆಂಬರ್ 05 | : ನಮ್ಮ ಹಿರಿಯ ಸಭಾಪಾಲಕರ ಆತ್ಮಚರಿತ್ರೆಯು ಸಫಲವಾಗಿ ಮುಗಿಸುವಂತೆ. |
| ಡಿಸೆಂಬರ್ 06 | : ಎಲ್ಲಾ ಸಭಾಪಾಲಕರು, ಮಿಶನರಿಗಳು ಮತ್ತು ಜಗತ್ತಿನಾದ್ಯಂತಹ ಇರುವ ಕ್ರೈಸ್ತ ಸಂಘ ಸಂಸ್ಥೆಗಳ ದೈವತ್ವದ ಸಂರಕ್ಷಣೆಗಾಗಿ. |
| ಡಿಸೆಂಬರ್ 07 | : ನಮ್ಮ ಪತ್ರಿಕೆಯ ಕೌನ್ಸಿಲ್ ಸದಸ್ಯರುಗಳಿಗಾಗಿ. |
| ಡಿಸೆಂಬರ್ 08 | : ನಮ್ಮ ಸಂತ ಪೌಲ ಮೆಟ್ರಿಕ್ಯುಲೇಷನ್ ಶಾಲೆ ಮತ್ತು ನೆಹಮೀಯ ಸತ್ಯವೇದ ಕಾಲೇಜುಗಳ ಸಿಬ್ಬಂದಿ ವರ್ಗದವರು, ವಿದ್ಯಾರ್ಥಿಗಳಿಗಾಗಿ. |
| ಡಿಸೆಂಬರ್ 09 | : ಪ್ರಪಂಚದಾದ್ಯಂತ ಹದಿಹರೆಯದವರು ಮತ್ತು ಯುವಜನರಲ್ಲಿ ಆತ್ಮಹತ್ಯೆಯ ಮನೋಭಾವವನ್ನು ತೊಡೆದು ಹಾಕಲು. |
| ಡಿಸೆಂಬರ್ 10 | : ಪ್ರಪಂಚದಾದ್ಯಂತ ಚಂಡಮಾರುತಗಳು ಮತ್ತು ಭೂಕಂಪದಂತಹ ನೈಸರ್ಗಿಕ ವಿಪತ್ತುಗಳ ತಡೆಗಟ್ಟುವಿಕೆ. |
| ಡಿಸೆಂಬರ್ 11 | : ನಮ್ಮ ಸಭೆಯ ಕೌನ್ಸಿಲ್ ಸದಸ್ಯರುಗಳಿಗಾಗಿ. |
| ಡಿಸೆಂಬರ್ 12 | : ನಮ್ಮ ಶಾಲೆಯ ಕೌನ್ಸಿಲ್ ಸದಸ್ಯರುಗಳಿಗಾಗಿ. |
| ಡಿಸೆಂಬರ್ 13 | : ಹೊಸ ಸಾಂಕ್ರಾಮಿಕ ರೋಗಗಳ ವಿರುದ್ಧ ವಿಶ್ವಾದ್ಯಂತ ದೈವಿಕ ರಕ್ಷಣೆಗಾಗಿ. |
| ಡಿಸೆಂಬರ್ 14 | : ಪ್ರಪಂಚದಾದ್ಯಂತ ಎಲ್ಲಾ ಕ್ರೈಸ್ತ ಸೇವೆಯಲ್ಲಿ ಒಂದು ದೊಡ್ಡ ಉಜ್ಜೀವನಕ್ಕಾಗಿ. |
| ಡಿಸೆಂಬರ್ 15 | : ವಿಶ್ವಾದ್ಯಂತ ಯುದ್ಧ ಮತ್ತು ಭಯೋತ್ಪಾದನೆ ಪೀಡಿತ ಪ್ರದೇಶಗಳಿಗೆ ಮರಳಲು ಶಾಂತಿ ಮತ್ತು ಸಾಮರಸ್ಯ. |
| ಡಿಸೆಂಬರ್ 16 | : ನಮ್ಮ **ನೆಹಮೀಯ ಸತ್ಯವೇದ ಕಾಲೇಜಿನ** ಕೌನ್ಸಿಲ್ ಸದಸ್ಯರುಗಳಿಗಾಗಿ. |
| ಡಿಸೆಂಬರ್ 17 | : ಎಲ್ಲಾ ವಿಶ್ವಾಸಿಗಳು ಸುಳ್ಳು ಭೋದನೆ ಮತ್ತು ಸುಳ್ಳು ಅದ್ಭುತಗಳಿಂದ ದೈವತ್ವದ ಸಂರಕ್ಷಣೆಗಾಗಿ. |
| ಡಿಸೆಂಬರ್ 18 | : ನಮ್ಮ ಅಸ್ಪತ್ರೆಯ ಸೇವೆಗಳಿಗಾಗಿ. |

(4ನೇ ಪುಟದಿಂದ)

ಬಹಳ ಶಕ್ತಿಯುಳ್ಳ ಅರಸನಾಗಿದ್ದರೂ ಅವನು ಎಷ್ಟೇ ಪ್ರಯತ್ನಿಸಿದರೂ ದೇವರ ಚಿತ್ತವನ್ನು ತಡೆಯಲು ಸಾಧ್ಯವಾಗಲಿಲ್ಲ. ದಾವಿದನು ಮುಂದಿನ ರಾಜನೆಂದು ಯೋನಾತನು ಒಪ್ಪಿಕೊಂಡನು ಮತ್ತು ಅವನ ಕೈ ಕೆಳಗೆ ಸೇವೆ ಮಾಡುವುದಕ್ಕೆ ತನ್ನ ಇಚ್ಛೆಯನ್ನು ವ್ಯಕ್ತಪಡಿಸಿದನು. ದೇವರ ವಾಗ್ದಾನವು ನೆರವೇರುವುದನ್ನು ಗುರುತಿಸಿದನು. ಯಾವುದೇ ಮನುಷ್ಯನ ಯೋಜನೆಯಾಗಲಿ, ನರಕದ ಯಾವುದೇ ತಂತ್ರವಾಗಲಿ ದೇವರ ಉದ್ದೇಶಕ್ಕೆ ವಿರೋಧವಾಗಿ ನಿಂತುಕೊಳ್ಳುವುದಕ್ಕೆ ಆಗುವುದಿಲ್ಲ. ನಮಗಾಗಿ ದೇವರು ಯೋಜನೆಯನ್ನು ಮಾಡಿದ್ದಾನೆ. ಯೆರಮೀಯ 29:11 ರಲ್ಲಿ ಈ ರೀತಿಯಾಗಿ ಉಲ್ಲೇಖಿಸಿದೆ. **ನಮಗೆ ನಿರೀಕ್ಷೆ ಮತ್ತು ಭವಿಷ್ಯಕ್ಕಾಗಿ ಯೋಜನೆಗಳು.**

ದಾವಿದನನ್ನು ಪ್ರೋತ್ಸಾಹ ಮಾಡುವುದಕ್ಕಾಗಿ ಯೋನಾತನು ಹೊರಗಡೆ ಹೋದನು. ಯಾವಾಗ ನಾವು ಇನ್ನೊಬ್ಬರನ್ನು ಪ್ರೋತ್ಸಾಹಿಸುತ್ತೇವೆ ಅವರು ದೇವರಲ್ಲಿ ಬಲವನ್ನು ಹೊಂದುತ್ತಾರೆ. ಇದು ನಮಗೆ ಜ್ಞಾಪಕಪಡಿಸುತ್ತದೆ. ಯಾರನ್ನಾದರೂ ಪ್ರೋತ್ಸಾಹಿಸಲು ನೀವು ಕೊನೆಯ ಬಾರಿಗೆ ಹೋಗಿದ್ದು ಯಾವಾಗ? ನಾವು ಅನೇಕ ಸಾರಿ ನಮ್ಮನ್ನು ಪ್ರೋತ್ಸಾಹಿಸಿಕೊಳ್ಳುವುದಕ್ಕೆ ಹುಡುಕುತ್ತೇವೆ. ಆದರೆ ನಾವು ಸಮಯವನ್ನು ತೆಗೆದುಕೊಂಡು ಮತ್ತು ಇತರರಿಗೆ ಅಗತ್ಯವಿರುವ ಬೇರೆಯವರಿಗೋಸ್ಕರ ಪ್ರಯತ್ನಿಸುತ್ತೇವೆಯೇ? ಈ ಹೊತ್ತಿನ ಕಾರ್ಯನಿರತವಾದ ದಿನಗಳಲ್ಲಿ ಇತರರ ಅಗತ್ಯಗಳನ್ನು ಕಡೆಗಣಿಸುವುದು ಸುಲಭ. ಹಣವನ್ನು ಕಳುಹಿಸುವುದು ಸಾಕು ಎಂದು ಅನೇಕ ಸಾರಿ ನಾವು ಆಲೋಚನೆ ಮಾಡುತ್ತೇವೆ. ಅದೇ ಪ್ರಕಾರ ಹಣಕಾಸಿನ ಸಹಾಯವು ಪ್ರಾಮುಖ್ಯವಾಗಿದೆ. ಅದರ ಜೊತೆಯಲ್ಲಿ ದೈಹಿಕ ಮತ್ತು ಮಾನಸಿಕವಾಗಿ ಇರುವುದು ಕೂಡ ಪ್ರಾಮುಖ್ಯವಾಗಿದೆ.

## ಬರ್ಜಿಲ್ಲೈ!

ಸತ್ಯವೇದದಲ್ಲಿ ಇನ್ನೊಂದು ಪ್ರೋತ್ಸಾಹ ವಾದಂತಹ ವ್ಯಕ್ತಿತ್ವವು ಬರ್ಜಿಲ್ಲೈ. ವಯಸ್ಸು ಕೇವಲ ಒಂದು ಸಂಖ್ಯೆ ಎಂದು ತೋರಿಸಿಕೊಟ್ಟ ವ್ಯಕ್ತಿ. 2 ಸಾಮ್ಯುವೇಲ 19:32 ಈ ರೀತಿಯಾಗಿ ಹೇಳುತ್ತದೆ. **ಇವನು ಎಂಭತ್ತು ವರುಷದ ಮುದುಕ ಬಹುಶ್ರೀಮಂತನಾಗಿದ್ದರಿಂದ ದಾವೀದನು ಮಹನಿಯಮನಲ್ಲಿದ್ದ ಕಾಲದಲ್ಲೆಲ್ಲಾ ಅವನ ಜೀವನಕ್ಕೆ ಬೇಕಾದದ್ದನ್ನು ಇವನೇ ಒದಗಿಸಿ ಕೊಡುತ್ತಿದ್ದನು.**

ದಾವಿದನು ಅರಣ್ಯದಲ್ಲಿ ತನ್ನ ಮಗನಿಂದ ಅಲೆದಾಡುತ್ತಾ ಇದ್ದನೋ, ಅನೇಕ ಜನರು ಅವನೊಂದಿಗೆ, ಅವನಿಗೆ ಆಹಾರ ಮತ್ತು ಇತರ ಸಂಪನ್ಮೂಲಗಳ ತುರ್ತು ಅಗತ್ಯವಿತ್ತು. ಬರ್ಜಿಲ್ಲೈ ಹಿರಿಯವನು ಮತ್ತು ಶ್ರೀಮಂತನು. ದಾವಿದನಿಗೆ ಮತ್ತು ಆತನ ಜೊತೆಗಾರರಿಗೆ ಸಹಾಯ ಮಾಡುವುದಕ್ಕೆ ಮೊದಲ ಹೆಜ್ಜೆ ಇಟ್ಟನು. ಮಹನಿಯಮನಲ್ಲಿ ಅವರು ಇರುವಾಗ ಅವರಿಗೆ ಆಹಾರವನ್ನು ಒದಗಿಸಿದನು. ದಾವಿದ ಮತ್ತು ಅವನ ಜೊತೆಗಾರರ ಭಾರವನ್ನು ಹಂಚಿಕೊಂಡನು.

ದಯೆಯ ಕಾರ್ಯಗಳು ಲಿಂಗ, ಜನಾಂಗ ಅಥವಾ ವಯಸ್ಸಿಗೆ ಸೀಮಿತವಾಗಿಲ್ಲ ಎಂಬುದನ್ನು ಈ ಕಥೆಯು ವಿವರಿಸುತ್ತದೆ. ಯಾರಾದರೂ ಇತರರ ಭಾರಗಳನ್ನು ಹೊರಲು ಸಹಾಯ ಮಾಡಬಹುದು. ಪ್ರಮುಖ ಅವಶ್ಯಕತೆಯು ಸಿದ್ಧ ಮತ್ತು ಸಹಾನುಭೂತಿಯ ಹೃದಯವಾಗಿದೆ. ದಾವಿದನು ಅವನ ದಯೆಗೆ ಪ್ರತಿಫಲವಾಗಿ ಬರ್ಜಿಲ್ಲೈನನ್ನು ತನ್ನೊಂದಿಗೆ ರಾಜ್ಯಕ್ಕೆ ಕರೆತರಲು ಮುಂದಾದಾಗ, ಬರ್ಜಿಲ್ಲೈ ನಮ್ರತೆಯಿಂದ ನಿರಾಕರಿಸಿದನು. ಬದಲಾಗಿ ಹಿಂದೆ ಉಳಿಯಲು ಆರಿಸಿಕೊಂಡನು. ಇದು ಪ್ರೀತಿ ಮತ್ತು ಕಾಳಜಿಯು ಸ್ವಾರ್ಥರಹಿತ ಉದ್ದೇಶಗಳನ್ನು ತೋರ್ಪಡಿಸುತ್ತದೆ. ಅವನು ಸರಳವಾಗಿ ದಾವಿದನಿಗಾಗಿ ಇರುವುದಕ್ಕೆ ಬಯಸಿದನು. ಅವನ ನೋವು ಮತ್ತು ಸಂಘರ್ಷ ಗಳನ್ನು ಹಂಚಿಕೊಳ್ಳುವುದು.

## ಯೇಸು!

ನಿಸ್ವಾರ್ಥ ಪ್ರೀತಿಗೆ ಯೇಸುವಿಗಿಂತ ದೊಡ್ಡ ಉದಾಹರಣೆ ಇಲ್ಲ. ಆತನು ನಮ್ಮನ್ನು ಆಳವಾಗಿ ಪ್ರೀತಿ ಮಾಡುತ್ತಾನೆ. ನಮಗಾಗಿ ಪರಲೋಕವನ್ನು ತ್ಯಜಿಸಿದನು. ನಮ್ಮ ಪಾಪಗಳಿಗಾಗಿ ಕಲ್ವಾರಿ ಶಿಲುಬೆಯಲ್ಲಿ ಸತ್ತನು. **ನಿನ್ನ ಕೃಪಾಕಟಾಕ್ಷವು ನನಗೆ ದೊಡ್ಡಸ್ತಿಕೆಯನ್ನು ಉಂಟು ಮಾಡಿದೆ** (ಕೀರ್ತನೆ 18:35). ಯೇಸು ತನ್ನನ್ನು ತಾನು ದೀನ ಮಾಡಿಕೊಂಡನು ಮತ್ತು ನಾವು ಆಶೀರ್ವಾದವನ್ನು ಹೊಂದುವುದಕ್ಕಾಗಿ ಆತನು ಶಾಪಗ್ರಸ್ತನಾದನು. ಆತನು ನಮ್ಮ ಅವಮಾನವನ್ನು ಹೊತ್ತುಕೊಂಡು ಇದರಿಂದ ನಾವು ತಲೆ ಎತ್ತಿ ನಡೆಯಬಹುದು. ಆತನ ತ್ಯಾಗದ ಮೂಲಕ ನಾವು ಅತ್ಯಂತ ದೊಡ್ಡದಾದ ಉಡುಗೊರೆ ಕ್ಷಮಾಪಣೆ ಮತ್ತು ನಿತ್ಯಜೀವವನ್ನು ಪಡೆದುಕೊಂಡಿದ್ದೇವೆ. ಆತನ ವಾಗ್ದಾನಗಳು **ನಾನು ನಿನ್ನನ್ನು ಎಂದಿಗೂ ತೊರೆಯುವುದಿಲ್ಲ, ಕೈಬಿಡುವುದಿಲ್ಲ** (ಇಬ್ರಿಯ 13:5). ಕರ್ತನು ಘೋಷಿಸುತ್ತಾನೆ. **ಅವನು ನನ್ನಲ್ಲಿ ಆಸಕ್ತನಾಗಿರುವುದರಿಂದ ಅವನನ್ನು ರಕ್ಷಿಸುವೆನು; ನನ್ನ ನಾಮವನ್ನು ಅರಿತವನಾಗಿರುವುದರಿಂದ ಅವನನ್ನು ಉದ್ಧರಿಸುವೆನು. ಅವನು ನನಗೆ ಮೊರೆಯಿಡುವಾಗ ಸದುತ್ತರವನ್ನು ದಯಪಾಲಿಸುವೆನು; ಇಕ್ಕಟ್ಟಿನಲ್ಲಿರುವಾಗ ಅವನ ಹತ್ತಿರವಿದ್ದು ಅವನನ್ನು ಅದರಿಂದ ಪಾರು ಮಾಡಿ ಘನಪಡಿಸುವೆನು.** (ಕೀರ್ತನೆ 91:14-15).

ನಮ್ಮ ಸಂಕಷ್ಟಗಳ ಸಮಯದಲ್ಲಿ ಆತನು ನಮ್ಮ ಸಂಗಡ ಇರುವೆನು ಎಂದು ದೇವರು ಮರು ಭರವಸೆಯನ್ನು ಕೊಟ್ಟಿದ್ದಾನೆ. ನಮ್ಮ ಹತ್ತಿರ ಯಾವಾಗಲೂ ಇರುತ್ತಾನೆ. ಯೇಸು ನಮ್ಮ ಭಾರಗಳನ್ನು ಆತನೊಂದಿಗೆ ಹಂಚಿಕೊಳ್ಳುವುದಕ್ಕೆ ನಮ್ಮನ್ನು ಆಹ್ವಾನಿಸುತ್ತಾನೆ. ಮತ್ತಾಯ 11:28-30.

**ಎಲೈ ಕಷ್ಟಪಡುವವರೇ, ಹೊರೆ ಹೊತ್ತವರೇ, ನೀವೆಲ್ಲರೂ ನನ್ನ ಬಳಿಗೆ ಬನ್ನಿರಿ; ನಾನು ನಿಮಗೆ**

(9ನೇ ಪುಟಕ್ಕೆ)

NEHEMIAH RESIDENTIAL BIBLE COLLEGE Chennai.
ECHO OF HIS CALL 1969-2019 REACHING NATIONS
Rush for admission!
Diploma in Theology
Medium : Hindi
Qualification : 10th Standard & above
Recognised by International Christian Leaders & Senior Pastors for the past 55 years
Contact : The Chairman, Nehemiah Bible College.
10, MOHAMMED ABDULLAH 2ND STREET, CHEPAUK, CHENNAI - 600 005, INDIA.
Phone : (+91-44) 2852 8282, Cell : (+91) 98410 71852 / 95661 31858
E.mail : sam@echoofhiscall.org / Website : www.echoofhiscall.org
✶ ONLINE CLASSES ARE AVAILABLE ✶

## MAIN CHURCH PROGRAMMES

1. Prayer Service : 24 hours
2. **ECHO OF HIS CALL** - Monthly Magazines :English, Tamil, Malayalam, Telugu, Hindi, Kannada, Marathi, Gujarati, Bengali, Odiya, Nepali, Assamese, Punjabi, Urdu, Sinhala & Afrikan.
3. **BIBLECOR -** Basic Bible Courses (English, Tamil & Hindi)
4. Theological Correspondence Courses: English & Tamil
5. Nehemiah Bible Colleges (Chepauk, Santhoshapuram & Velachery)
6. Great Commission Partners (Network of Pastors)
7. Training Programmes – Seminars & Retreats
8. Crusades
9. Literature Distribution and Follow Up
10. Gospel Printing Press - Publications
11. St. Paul's Matriculation School - Village English High School
12. Sunday Schools (Chepauk) : 10.30 a.m. Sunday & (Velachery, Balaji Nagar & Santhoshapuram) 3.00 p.m. Sunday
13. **Early Morning Service : 5.30 a.m. Sunday**
14. **Preliminy Service : 8.00 a.m. Sunday**
15. **Tamil Service : 8.30 a.m. Sunday**
16. **Youth Meeting : 11.00 a.m. Sunday**
17. **Fellowship Lunch : 1.00 p.m. Sunday**
18. **Hindi Service : 4.00 p.m. Sunday**
19. **Telugu Service : 5.00 p.m. Sunday**
20. **English & Hindi Service : 6.00 p.m. Sunday**
21. Feedback Time : 7.30 p.m. Sunday
22. Women's Prayer : 5.30 p.m. Wednesday
23. Men's Prayer : 7.00 p.m. Friday
24. Discipleship Meeting : 6.00 p.m. Saturday
25. House Meetings : 6.30 p.m. Tuesday & Thursday
26. Special Holy Communion : 6.00 a.m. 1st day of each month
27. Ministers' Meeting : 6.00 p.m. First Saturday
28. Parents' Prayer : 4.00 p.m. First Sunday
29. Night Prayer : 9.30 p.m. Third Friday
30. Fasting Prayer : 9:30 a.m. Second Saturday
31. Holy Communion : Second Sunday Services
32. Youth / Kid Prayer : 10.00 p.m. daily (over phone)
33. Staff Devotion : 9.00 a.m. daily
34. Office : 9.00 a.m. to 9.00 p.m. (except Sundays)

## Echo of His Call Postal Courses for candidates in India

### 1. BIBLECOR

We offer Postal Course on Basic Truths of The Bible to new Christians and non-Christians in English – 57 pages, Hindi – 76 pages & Tamil – 96 pages. You will get a Course Book entitled **New Life – For You!** **After the completion of this course, you will get a certificate. There will be no compulsory fees. You will be blessed!** - Editor

### 2. THEOLOGICAL CORRESPONDENCE COURSE

Advanced Distance Education called **Theological Correspondence Course** is available in English – 537 pages and Tamil – 652 pages for Pastors, Evangelists, Christian Leaders and for lay people who have passion to do God's Ministry! A fee of Rs. 1000/- is charged. 7 Books with 149 Chapters are supplied. **Certificate in Ministry** will be awarded. **God will bless you!**

***For more details, write to us.***

**The Chairman, Nehemiah Bible College,**
**Echo of His Call, Post Box 2957**
CHEPAUK, CHENNAI - 600 005.
**Ph.: (044) 2852 8282, 2852 9293, 2854 7766,**
**Cell : 98410 71852, 95661 31858**
**E.mail : biblecor@yahoo.co.in**

## A good opportunity to get Echo of His Call monthly magazine at free of cost

If you could send the addresses of your friends / relatives through post, letter, e.mail, WhatsApp or phone to us, we will dispatch **Echo of His Call** monthly magazine to them at free of cost.

## TAX EXEMPTION

Donations by any individual or organization from India to **Echo of His Call Educational Trust** are eligible for Income Tax exemption under Section 80G of the Income Tax Act. Official receipts will be issued for this purpose. Please make your Demand Drafts / Cheques / M.O. for such donations in favour of **Echo of His Call Educational Trust** and send to us, along with your Aadhar Number and PAN for getting Income Tax Exemption.

| | | |
|---|---|---|
| **Account Name** | : | **ECHO OF HIS CALL EDUCATIONAL TRUST** |
| **Account Number** | : | **1023 2923 805** |
| **Bank Name** | : | **STATE BANK OF INDIA** |
| **Branch** | : | **TRIPLICANE, CHENNAI - 600 005** |
| **IFSC Code** | : | **SBIN 0000249** |
| **SWIFT Code** | : | **SBI NIN BB 455** |



# ಹಳ್ಳದಿಂದ ಅರಮನೆಗೆ

# PIT TO PALACE

(ಪಾಸ್ಟರ್ ಎಸ್. ಸ್ಯಾಮ್ ಸೆಲ್ವರಾಜ್‌ರವರ ಜೀವನದ ಅನುಭವಗಳು)

"ಯಾರು ಓದುತ್ತಾರೋ ಅವರಿಗೆ ಅರ್ಥವಾಗಲಿ." (ಮತ್ತಾಯ 24:15)



## ಒಂದು ಚಿಕ್ಕ ಪೆನ್ಸಿಲ್ ಚಾಪೆಯ ಹಳೆಯ ಕಥೆ !

ಸರ್ಕಾರಿ ಶಾಲೆಯ ಹಳ್ಳಿಯಲ್ಲಿ ನಾನು 5ನೇ ತರಗತಿಯನ್ನು ಮುಗಿಸಿದ ನಂತರ, ಹಿರಿಯ ಶಾಲೆಯಲ್ಲಿ ನನಗೆ ಪದೋನ್ನತಿ ಮತ್ತು ಪ್ರವೇಶ ವಾಯಿತು. ಅಲ್ಲಿ ಮೊದಲ ಸಾರಿ ಆಂಗ್ಲಭಾಷೆಯ ಮೊದಲ ಅಕ್ಷರಗಳನ್ನು ಕಲಿಸುತ್ತಾರೆ. ಶಾಲೆಯ ಮೊದಲ ದಿನದಲ್ಲಿ ತರಗತಿಯ ಶಿಕ್ಷಕರು ಎಲ್ಲಾ ವಿದ್ಯಾರ್ಥಿಗಳಿಗೆ **ಪೆನ್ಸಿಲ್ ಮತ್ತು ಪುಸ್ತಕ**ವನ್ನು ಮರುದಿನ ತರಬೇಕೆಂದು ಸೂಚಿಸಿದರು. ನಾನು ಮನೆಗೆ ಬಂದ ತಕ್ಷಣವೇ ಈ ಅಗತ್ಯತೆಯನ್ನು ನನ್ನ ತಾಯಿಗೆ ತಿಳಿಸಿದೆನು. ಯಾಕೆಂದರೆ ನನ್ನ ತಂದೆ ಹೊರಗಡೆ ಹೋಗಿದ್ದರು. ಆಕೆಗೆ ನೋಟ್ ಪುಸ್ತಕವನ್ನು ಪಡೆಯಲು ಸಾಧ್ಯವಾಯಿತು. ಆದರೆ ನನಗೆ ಪೆನ್ಸಿಲ್ ಖರೀದಿಸಲು ಸಾಧ್ಯವಾಗಲಿಲ್ಲ. ನಮ್ಮ ನೆರೆಯ ಸಂಬಂಧಿಕರಿಂದ ಈ ಅಗತ್ಯವನ್ನು ಪೂರೈಸಲು ಆಕೆಯು ಸಿದ್ಧರಿಲ್ಲದ ಕಾರಣ, ಆಕೆಯು ನನಗೆ ತನ್ನ ಅಸಾಮರ್ಥ್ಯವನ್ನು ವಿವರಿಸಿದಳು ಮತ್ತು ನನ್ನ ಬಳಕೆಗಾಗಿ ಪೆನ್ಸಿಲ್ ಪೂರೈಕೆಗಾಗಿ ಕರ್ತನಾದ ಯೇಸುಕ್ರಿಸ್ತನನ್ನು ಪ್ರಾರ್ಥಿಸಲು ಹೇಳಿದಳು.

ಆಕೆಯ ಮಾತುಗಳಿಗೆ ವಿಧೇಯನಾಗಿ, ನಾನು ರಾತ್ರಿಯಲ್ಲಿ ದೇವರಿಗೆ ಮೊಣಕಾಲೂರಿ ನನಗೆ ಪೆನ್ಸಿಲ್‌ನ್ನು ಕೊಡು ಎಂದು ಪ್ರಾರ್ಥನೆ ಮಾಡಿ ಮಲಗಿದೆನು. ಮರುದಿನ ಬೆಳಿಗ್ಗೆ ದೇವರು ನನಗೆ ಪೆನ್ಸಿಲ್‌ನ್ನು ಕೊಡಲಿಲ್ಲ. ನಾನು ಪೆನ್ಸಿಲ್ ಇಲ್ಲದೆ ಶಾಲೆಗೆ ಹೋಗಬೇಕಾಯಿತು. ಬೇರೆ ವಿದ್ಯಾರ್ಥಿಗಳು ತಮ್ಮ ಉಪಯೋಗಕ್ಕಾಗಿ ಪೆನ್ಸಿಲ್‌ನ್ನು ತೆಗೆದುಕೊಂಡು ಬಂದಿದ್ದರು. ನಾನು ಒಬ್ಬನೇ ಮಾತ್ರ ಶಿಕ್ಷಕರ ಆಜ್ಞೆಗೆ ವಿಧೇಯನಾಗಲಿಲ್ಲ. ಆದ್ದರಿಂದ ಶಿಕ್ಷಕರು ನನ್ನೊಂದಿಗೆ ಸಂತೋಷವಾಗಲಿಲ್ಲ. ಮರುದಿನ 'ನೀನು ಪೆನ್ಸಿಲ್ ಇಲ್ಲದೆ ಶಾಲೆಗೆ ಬರಬಾರದು' ಎಂದು ಶಿಕ್ಷಕಿ ನನಗೆ ಹೇಳಿದಳು.

ನನ್ನ ವಿಷಯದಲ್ಲಿ ಶಿಕ್ಷಕರು ಸಂತೋಷ ಪಡಲಿಲ್ಲ ಎಂದು ಮನೆಗೆ ಬಂದು ನನ್ನ ತಾಯಿಗೆ ವಿವರಿಸಿದೆನು. ಆಕೆಯು ಸುಮ್ಮನೆ ನನ್ನನ್ನು ನೋಡಿ ನಕ್ಕಳು ಮತ್ತು'ನಿರಂತರವಾಗಿ ಕರ್ತನಾದ ಯೇಸುಕ್ರಿಸ್ತನಿಗೆ ಪ್ರಾರ್ಥನೆ ಮಾಡು' ಎಂದು ಮರುದಿನ ಕೂಡ ಆಕೆಯು ನನಗೆ ಹೇಳಿದಳು. ಪೆನ್ಸಿಲ್ ದಾರಿಯಲ್ಲಿ ಬರುತ್ತಾ ಇದೆ ಎಂದು ಹೇಳಿದಳು. ನಾನು ಅದೇ ರೀತಿಯಾಗಿ ಮಾಡಿದೆನು. ಆದರೆ ಏನೂ ಆಗಲಿಲ್ಲ. ಮತ್ತೆ ನಾನು ಬರಿಗೈಯಲ್ಲಿ ಶಾಲೆಗೆ ಹೋಗಬೇಕಾಯಿತು. ಶಿಕ್ಷಕರು ಕೇಳಿದಾಗ, ನಾನು ಕರ್ತನಾದ ಯೇಸುಕ್ರಿಸ್ತನಿಗೆ ನನ್ನ ತಾಯಿಯ ಮಾತಿನ ಮೇರೆಗೆ ಪ್ರಾರ್ಥನೆ ಮಾಡಿದ್ದೇನೆ. ಅದು ದಾರಿಯಲ್ಲಿ ಇದೆ ಎಂದು ಹೇಳಿದೆನು. ಶಿಕ್ಷಕರು ನನ್ನ ತಾಯಿ ನಡವಳಿಕೆಗಾಗಿ ಸಿಟ್ಟಾಗಿ ನನ್ನೊಂದಿಗೆ ಕೋಪಗೊಂಡರು. ನಾಳೆ ನೀನು ಪೆನ್ಸಿಲ್ ಇಲ್ಲದೆ ಶಾಲೆಗೆ ಬರಬಾರದೆಂದು ಶಿಕ್ಷಕರು ಮತ್ತೆ  ಹೇಳಿದರು.

ದೊಡ್ಡ ನಿರಾಶೆಯಿಂದ ಈ ಒಂದು ವಿಷಯ ವನ್ನು ತನ್ನ ತಾಯಿಯ ಬಳಿಗೆ ತೆಗೆದುಕೊಂಡು ಹೋದೆನು. ನನ್ನ **ಪೆನ್ಸಿಲ್ ಪ್ರಾರ್ಥನೆ**ಯನ್ನು ಕೇಳಿದ್ದಕ್ಕಾಗಿ ಕರ್ತನಾದ ಯೇಸುಕ್ರಿಸ್ತನಿಗೆ ಕೃತಜ್ಞತೆಯನ್ನು ಸಲ್ಲಿಸು ಎಂದು ಹೇಳಿದಳು. ನಾನು ಮಧ್ಯರಾತ್ರಿಯವರೆಗೆ ಕರ್ತನಿಗೆ ಧನ್ಯವಾದಗಳನ್ನು ಹೇಳಿದೆನು. ಆದರೆ ನನಗೆ ನಿದ್ದೆ ಬರಲಿಲ್ಲ. ಕಷ್ಟಕರವಾದ ಸಮಯದ ಬಗ್ಗೆ ಆಲೋಚನೆ ಮಾಡುತ್ತಾ ಇದ್ದೆನು. ನಾನು ಪೆನ್ಸಿಲ್ ಇಲ್ಲದೆ ಹೋದರೆ ಮರುದಿನ ಶಾಲೆಯಲ್ಲಿ ನಾನು ಶಿಕ್ಷೆಯನ್ನು ಎದುರಿಸುತ್ತೇನೆ.

ನಡೆಯಬೇಕಾದ ಮಾರ್ಗಕ್ಕೆ ತಕ್ಕಂತೆ ಹುಡುಗನನ್ನು ಶಿಕ್ಷಿಸು; ಮುಪ್ಪಿನಲ್ಲಿಯೂ ಓರೆಯಾಗನು. (ಜ್ಞಾನೋಕ್ತಿಗಳು 22:6).



ನನ್ನ ಆಶ್ಚರ್ಯಕ್ಕೆ ಇದ್ದಕ್ಕಿದ್ದಂತೆ ಮಧ್ಯರಾತ್ರಿಯಲ್ಲಿ ಯಾರೋ ಬಾಗಿಲು ಬಡಿಯುತ್ತಿರುವುದನ್ನು ನಾನು ಕೇಳಿದೆನು. ಕೆಲವು ಕಳ್ಳರು ಬಾಗಿಲನ್ನು ಬಡಿಯುತ್ತಾ ಇದ್ದಾರೆ ಎಂದು ನನ್ನ ತಾಯಿಯು ಹೇಳಿದಳು. ಮನೆಯಲ್ಲಿ ಯಾವುದೇ ಹಿರಿಯ ಪುರುಷ ಸದಸ್ಯರಿಲ್ಲ ಎಂದು ತಿಳಿದು ನನ್ನನ್ನು ಮೌನವಾಗಿರು ಮತ್ತು ಹಾಸಿಗೆಯ ಕೆಳಗೆ ಮಲಗಲು ಹೇಳಿದಳು.

ಕಿಟಕಿಯಿಂದ ನನ್ನ ತಾಯಿಯ ಹೆಸರನ್ನು ಹೇಳುತ್ತಾ ಇರುವ ಸ್ವರವನ್ನು ನಾವು ಕೇಳಿದೆವು. ಆತನು ಬೇರೆ ಯಾರೂ ಆಗಿರಲಿಲ್ಲ ನನ್ನ ಅಂಕಲ್ ಸೆಲ್ವಮಣಿ. ಪಾಲಿಯಂಕೊಟ್ಟೈಯ ಎಂಬ ಪಟ್ಟಣದಲ್ಲಿ ಪೋಲೀಸ್ ಆಫೀಸರ್ ಆಗಿ ಕೆಲಸ ಮಾಡುತ್ತಿದ್ದರು. ಅದು ನಮ್ಮ ಮನೆಯಿಂದ ಸುಮಾರು 70 ಕಿಲೋಮೀಟರ್ ಇದೆ. ನಾವು ಸಂತೋಷದಿಂದ ಬಾಗಿಲನ್ನು ತೆರೆದೆವು. ಆತನು ಅನೇಕ ಉಡುಗೊರೆಗಳನ್ನು, ಬಿಸ್ಕಿಟ್, ಸಿಹಿತಿಂಡಿಗಳನ್ನು, ಬಟ್ಟೆಗಳನ್ನು ಮುಂತಾದವು ಗಳನ್ನು ತೆಗೆದುಕೊಂಡು ಬಂದಿದ್ದರು. ನಾನು ಒಂದು ಪ್ರತ್ಯೇಕವಾದ ಉಡುಗೊರೆಯ ಬಾಕ್ಸ್‌ನ್ನು ತೆಗೆದಾಗ, ಅದರಲ್ಲಿ ಒಂದು ಬಾಕ್ಸ್‌ಅನ್ನು ನಾನು ನೋಡಿದೆನು. ನಾನು ಆಶ್ಚರ್ಯವುಳ್ಳವನಾಗಿ ತೆಗೆದಾಗ, ಆ ಒಂದು ಬಾಕ್ಸ್‌ನಲ್ಲಿ ಬಹಳ ಬೆಲೆಯುಳ್ಳ ಪೂರ್ತಿ ನಟರಾಜ್ ಪೆನ್ಸಿಲ್‌ಗಳು ಇದ್ದವು. (ಅಂದಿನ ದಿನಗಳಲ್ಲಿ ನಟರಾಜ್ ಪೆನ್ಸಿಲ್‌ಗಳು ಬಹಳ ಬೆಲೆಯುಳ್ಳವುಗಳು ಆಗಿದ್ದವು). ಆ ಒಂದು ಬಾಕ್ಸ್‌ನಲ್ಲಿ 24 ಪೆನ್ಸಿಲ್‌ಗಳು ಇದ್ದವು.

ಆ ಒಂದು ರಾತ್ರಿ ನಾನು ಕುಣಿದಾಡುತ್ತಾ ಕರ್ತನಾದ ಯೇಸುಕ್ರಿಸ್ತನು ನನ್ನ ಪ್ರಾರ್ಥನೆಯನ್ನು  ಕೇಳಿ ಮತ್ತು ಉತ್ತರಿಸಿದನು ಎಂದು ಹೇಳಿದೆನು. ಅತಿಶಯವಾದ ಸಂತೋಷದಿಂದ ಇಡೀ ರಾತ್ರಿ ನಾನು ನಿದ್ದೆ ಮಾಡಲಿಲ್ಲ.

ಮರುದಿನ ಮುಂಜಾನೆ, ಇತರ ವಿದ್ಯಾರ್ಥಿಗಳು ತಲಾ ಒಂದು ಪೆನ್ಸಿಲ್ ಅನ್ನು ಮಾತ್ರ ತಂದಾಗ ನಾನು 24 ಸಂಖ್ಯೆಗಳ ಬೆಲೆಬಾಳುವ ಪೆನ್ಸಿಲ್‌ಗಳ ಪೆಟ್ಟಿಗೆಯೊಂದಿಗೆ ಸಂತೋಷದಿಂದ ಶಾಲೆಗೆ ಹೋದೆ. ಶಿಕ್ಷಕರು ಅಸಭ್ಯ ಮುಖದಿಂದ ನನ್ನ ಬಳಿಗೆ ಬಂದು ಏನಾಯಿತು ಎಂದು ಕೇಳಿದರು. ನಿನ್ನೆ ದಾರಿಯಲ್ಲಿದ್ದ ಪೆನ್ಸಿಲ್ ಇಂದು ಅದ್ಭುತ ರೀತಿಯಲ್ಲಿ ನನ್ನ ಕೈಗೆ ಬಂದಿದೆ ಎಂದು ನಾನು ಉತ್ತರಿಸಿದೆ. ಆಕೆಯು ಸಂತೋಷದಿಂದ ನನ್ನ ಬೆನ್ನುತಟ್ಟಿ ಮತ್ತು ಜೀವಂತ ದೇವರಿದ್ದಾನೆ ಎಂದು ವಿದ್ಯಾರ್ಥಿಗಳಿಗೆ ಘೋಷಿಸಿದರು. ಆತನ ಹೆಸರು ಯೇಸುಕ್ರಿಸ್ತನು.

ಪ್ರಿಯ ಓದುಗರೇ, ನಾನು 7ರ ವಯಸ್ಸಿನಲ್ಲಿದ್ದಾಗ ಈ ಘಟನೆಯು ನಡೆಯಿತು. ಆದರೆ ಅದರ ಅನುಭವವು ಇನ್ನೂ ನನ್ನ ಮನಸ್ಸಿನಲ್ಲಿ

ಹಚ್ಚಹಸಿರಾಗಿದೆ. ನನಗೆ ಪೆನ್ಸಿಲ್‌ಗಳನ್ನು ಒದಗಿಸಿದ ದೇವರು ಇನ್ನೂ ಜೀವಂತವಾಗಿದ್ದಾನೆ. **ಆತನು ನಿನ್ನೆ ಇದ್ದ ಹಾಗೆ ಈ ಹೊತ್ತು ನಿರಂತರವು ಇದ್ದಾನೆ** (ಇಬ್ರಿ 13:8). ನಾನು ಈ ಹೊತ್ತು ಕೂಡ ನನ್ನ ಕೊಠಡಿಯಲ್ಲಿ ಒಂದು ಸಣ್ಣ ಚಾಪೆಯನ್ನು ಇಟ್ಟುಕೊಂಡಿದ್ದೇನೆ. ಅದನ್ನು ನಾನು ಪೆನ್ಸಿಲ್ ಚಾಪೆಯೆಂದು ಕರೆಯುತ್ತೇನೆ. **ನಾನು ಪ್ರತಿದಿನ ಮುಂಜಾನೆ ಪೆನ್ಸಿಲ್ ಚಾಪೆಗೆ ಹೋಗುತ್ತೇನೆ ಮತ್ತು ನನ್ನ ಬಿಗಿಯಾದ ವೇಳಾಪಟ್ಟಿಯ ನಡುವೆಯೂ ದಿನಕ್ಕೆ ಕನಿಷ್ಠ ಮೂರು ಬಾರಿ ಪ್ರಾರ್ಥಿಸಲು ಪ್ರಯತ್ನಿಸುತ್ತೇನೆ ಮತ್ತು ನನ್ನ ಅಗತ್ಯಗಳನ್ನು ಅದೇ ದೇವರಾದ ಯೇಸುಕ್ರಿಸ್ತನಿಗೆ ರವಾನಿಸುತ್ತೇನೆ. ಇಲ್ಲಿಯವರೆಗೆ ಹಲವಾರು ಮಿನಿಬಸ್‌ಗಳು, ದೊಡ್ಡ ಕಟ್ಟಡ ಮುಂತಾದವುಗಳನ್ನು ಆತನಿಂದ ಸ್ವೀಕರಿಸಿದ್ದೇನೆ ಪೆನ್ಸಿಲ್ ಚಾಪೆಯ ಮೂಲಕವಾಗಿ. ಆದ್ದರಿಂದ ಪವಿತ್ರ ಸತ್ಯವೇದವನ್ನು ಹೊತ್ತಿರುವ ಕೈಗಳು ಮತ್ತು ಪ್ರಾರ್ಥನೆ ಮಾಡಲು ಮಂಡಿಯೂರುವ ಕಾಲುಗಳು ವಿಫಲ ಗೊಳ್ಳುವುದಿಲ್ಲ ಎಂದು ನಾನು ತೀರ್ಮಾನಕ್ಕೆ ಬಂದಿದ್ದೇನೆ.**

ಆದ್ದರಿಂದ ಕಳೆದ ನನ್ನ 55 ವರ್ಷಗಳ ಸೇವೆಯಲ್ಲಿ, ನಾನು ಯಾವುದೇ ಹಣವನ್ನು ಸಂಗ್ರಹಿಸುವ ಯೋಜನೆಯನ್ನು ನಡೆಸಿಲ್ಲ ಅಥವಾ ನಮ್ಮ ಬಹುವಿಧದ ಸೇವೆಗಳ ಅಗತ್ಯಗಳಿಗಾಗಿ ಹಣವನ್ನು ಸಂಗ್ರಹಿಸಲು ಅಥವಾ ವಸ್ತುಗಳನ್ನು ಪಡೆಯಲು ವ್ಯಕ್ತಿಯ ಮನೆ ಬಾಗಿಲಿಗೆ ಹೋಗಿಲ್ಲ. ನನಗೆ ಉತ್ತರಿಸಿದ ನನ್ನ ದೇವರಿಂದ, ನನ್ನ ಎಲ್ಲಾ ಅಗತ್ಯಗಳಿಗಾಗಿ ನನ್ನ ಪೆನ್ಸಿಲ್ ಚಾಪೆಯಿಂದ ನಾನು ಹಣವನ್ನು ಪಡೆದಿದ್ದೇನೆ.

**ನನ್ನನ್ನು ಬಲಪಡಿಸುವಾತನಲ್ಲಿದ್ದುಕೊಂಡು ಎಲ್ಲಕ್ಕೂ ಶಕ್ತನಾಗಿದ್ದೇನೆ.** ಫಿಲಿಪ್ಪಿ 4:13

★ ★ ★

*(6ನೇ ಪುಟದಿಂದ)*

**ವಿಶ್ರಾಂತಿಕೊಡುವೆನು. ನಾನು ಸಾತ್ವಿಕನೂ ದೀನಮನಸ್ಸಿನವನೂ ಆಗಿರುವುದರಿಂದ ನನ್ನ ನೊಗವನ್ನು ನಿಮ್ಮ ಮೇಲೆ ತೆಗೆದುಕೊಂಡು ನನ್ನಲ್ಲಿ ಕಲಿತುಕೊಳ್ಳಿರಿ; ಆಗ ನಿಮ್ಮ ಆತ್ಮಗಳಿಗೆ ವಿಶ್ರಾಂತಿ ಸಿಗುವುದು. ಯಾಕೆಂದರೆ ನನ್ನ ನೊಗವು ಮೃದುವಾದದ್ದು; ನನ್ನ ಹೊರೆಯು ಹಗುರವಾದದ್ದು ಅಂದನು.**

ಆತನು ಸಿದ್ಧನಾಗಿದ್ದಾನೆ ಮತ್ತು ಆತನ ಹತ್ತಿರ ಬರಬೇಕೆಂದು ಕಾಯುತ್ತಾ ಇದ್ದಾನೆ. ನಮ್ಮ ಚಿಂತೆಗಳು, ನೋವುಗಳು, ಸೋಲುವಿಕೆಗಳು ಮತ್ತು ಭಯಗಳನ್ನು ಆತನ ಮೇಲೆ ಹಾಕುವುದಕ್ಕಾಗಿ. ಈ ಹೊತ್ತು ಆತನ ಬಳಿಗೆ ಬರುತ್ತೀರಾ ಮತ್ತು ನಿಮ್ಮ ಭಾರಗಳನ್ನು ಆತನೊಂದಿಗೆ ಹಂಚಿಕೊಳ್ಳುತ್ತೀರಾ? ಯೇಸು ನಮ್ಮ ಹೊರೆಗಳನ್ನು ಹೊತ್ತಿರುವಷ್ಟು ಮತ್ತು ನಮಗಾಗಿ ಪ್ರಾರ್ಥಿಸಲು ಸಭೆ ಕುಟುಂಬದ ಬೆಂಬಲವನ್ನು ನಾವು ಹೊಂದಿದ್ದೇವೆ. ಬೇರೊಬ್ಬರ ಜೀವನದಲ್ಲಿ ಯೋನಾತನ ಆಗಲು ನಾವು ಮಾರ್ಗಗಳನ್ನು ಹುಡುಕಬೇಕು.

## 1. ಬೇರೆಯವರಿಗೋಸ್ಕರ ಪ್ರಾರ್ಥಿಸುವುದು!

ಪ್ರಾರ್ಥನೆಯು ಬಹಳ ಬಲವಾದ ಸಾಧನವಾಗಿದೆ. ನಾವು ಪರಸ್ಪರ ಪ್ರಾರ್ಥಿಸಬೇಕು. ನೀವು ಯಾರಾದರೂ ಪಾಪದಲ್ಲಿ ಸಿಕ್ಕಿಕೊಂಡಿದ್ದನ್ನು ನೋಡಿದರೆ ಅವರನ್ನು ದೂಷಿಸುವ ಬದಲಾಗಿ ಅವರಿಗಾಗಿ ಪ್ರಾರ್ಥಿಸಿರಿ ಮತ್ತು ಅವರೊಂದಿಗೆ. ಅವರ ಜೊತೆಯಲ್ಲಿ ನಡೆಯಿರಿ. ನೀವು ಯಾರಾದರೊಂದಿಗೆ ಅಸಮಾಧಾನವಿದ್ದರೆ ಅವರ ಬಗ್ಗೆ ಬೇರೆಯವರೊಂದಿಗೆ ಗೊಡ್ಡುಹರಟೆ ಮಾಡುವ ಬದಲಾಗಿ ಅವರಿಗಾಗಿ ಪ್ರಾಮಾಣಿಕವಾಗಿ ಪ್ರಾರ್ಥಿಸಿರಿ.

## 2. ಕೇಳುವುದು!

ಅನೇಕ ಸಮಯಗಳಲ್ಲಿ, ಜನರು ಯಾರಾದರೂ ನಮ್ಮನ್ನು ಕೇಳಬೇಕೆಂದು ಬಯಸುತ್ತಾರೆ. ಅವರಿಗೆ ಯಾವುದೇ ಸಲಹೆ ಬೇಕಾಗಿಲ್ಲ ಅಥವಾ ಅವರ ಸಮಸ್ಯೆಗಳಿಗಾಗಿ ಪರಿಹಾರ, ಅವರಿಗೆ ಸರಳ ದಯೆಯ ಸಾಂತ್ವನದ ಮಾತು ಬೇಕಾಗಿದೆ. ತೀರ್ಪು ಇಲ್ಲದೆ ಕೇಳಿರಿ. ಅದು ನಿಮ್ಮ ಕುಟುಂಬ ಸದಸ್ಯರು, ಸ್ನೇಹಿತ ಅಥವಾ ನಿಮಗಾಗಿ ಯಾರಾದರೂ ನೋವನ್ನುಂಟು ಮಾಡಿರಬಹುದು. ಜನರಿಗೆ ಹೆಚ್ಚು ಅಗತ್ಯವಿರುವಾಗ ಉತ್ತಮ ಕೇಳುಗರಾಗಿರಿ.

## 3. ಅಗತ್ಯತೆಗಳನ್ನು ಪೂರೈಸುವುದು!

ನಂಬಿಕೆಯು ಕ್ರಿಯೆಗಳ ಮೂಲಕ ತೋರ್ಪಡಿಸ ಬೇಕೆಂದು ಯಾಕೋಬನು ನಮಗೆ ಕಲಿಸುತ್ತಾನೆ. ಪ್ರಾರ್ಥನೆ ಮತ್ತು ಕೇಳುವುದು ಮಾತ್ರ ಸಾಕಾಗುವುದಿಲ್ಲ. ಇತರರ ಅಗತ್ಯಗಳನ್ನು ಪೂರೈಸಲು, ಸಹಾಯ ಮಾಡಲು ನಾವು ಪ್ರಾಯೋಗಿಕ ಮಾರ್ಗಗಳನ್ನು ಕಂಡುಕೊಳ್ಳಬೇಕು. ಇದು ಯಾವಾಗಲೂ ಹಣವನ್ನು ಒಳಗೊಂಡಿರುವುದಿಲ್ಲ. ನಮ್ಮ ಕೌಶಲ್ಯಗಳು, ಪರಿಣತಿ ಮತ್ತು ಸಹಾಯ ಮಾಡುವುದಕ್ಕೆ ಜ್ಞಾನವನ್ನು ಉಪಯೋಗಿಸಿಕೊಳ್ಳಬಹುದು.

## 4. ತಂತ್ರಜ್ಞಾನ!

ಒಂದು ಒಳ್ಳೆಯ ಉದ್ದೇಶಕ್ಕಾಗಿ ತಂತ್ರಜ್ಞಾನವನ್ನು ಉಪಯೋಗಿಸುವುದು, ಒಂದು ಪ್ರೋತ್ಸಾಹದ ಸಂದೇಶವನ್ನು ಕಳುಹಿಸುವುದು ಅಥವಾ ಕಷ್ಟಗಳ ಮಧ್ಯದಲ್ಲಿ ಹಾದುಹೋಗುವ ಯಾರಿಗಾದರೂ ಒಂದು ಧ್ವನಿಯ ಸಂದೇಶವನ್ನು ಕಳುಹಿಸುವುದು, ಒಂದು ಪ್ರಾರ್ಥನೆಯನ್ನು ಕಳುಹಿಸುವುದು. ಒಂದು ಮೇಲೆತ್ತುವ ಸಂದೇಶ. ಅಲ್ಲಿ ನೀವು ದೈಹಿಕವಾಗಿ ಇಲ್ಲದೆ ಹೋದರೂ ಪರವಾಗಿಲ್ಲ, ನಿಮ್ಮ ಮಾತುಗಳು ಶಕ್ತಿಯುತವಾದ ಪರಿಣಾಮ ಬೀರುತ್ತವೆ. ಸತ್ಯವೇದದ ವಚನಗಳನ್ನು ಹಂಚಿಕೊಳ್ಳುವುದು, ಸರಳ ಸಂದೇಶವು ಅವರ ಆತ್ಮವನ್ನು ಸಂತೈಸುತ್ತದೆ. ಕಷ್ಟಗಳನ್ನು ಅನುಭವಿಸುವವರಿಗೆ ಸಹಾಯ ಮಾಡಿರಿ.

## 5. ಸಭೆಯ ಬಗ್ಗೆ ಕಾಳಜಿ ವಹಿಸುವುದು!

ನಿಮ್ಮ ಸಭೆಯ ಯೋಗಕ್ಷೇಮವನ್ನು ಪರಿಶೀಲಿಸುವ ಅಭ್ಯಾಸವನ್ನು ಮಾಡಿಕೊಳ್ಳಿ. ನಿಮ್ಮ ಸಭೆಯಲ್ಲಿ ಯಾರಾದರೂ ಅನುಪಸ್ಥಿತಿಯಿದ್ದರೆ ಅವರಿಗೆ ಕರೆಯನ್ನು ಮಾಡಿರಿ. ನಾನು ನಿನಗಾಗಿ ಪ್ರಾರ್ಥನೆ ಮಾಡಲಾ ಎಂದು ಕೇಳಿರಿ? ನಿಮಗಾಗಿ ನಾನು ಏನಾದರೂ ಸಹಾಯ ಮಾಡಬಹುದಾ? ನಮ್ಮ ಸಹೋದರರು ಮತ್ತು ಸಹೋದರಿಯರು ಅವರು ಕುಟುಂಬದ ಭಾಗವೆಂದು ತಿಳಿದಿರುವುದನ್ನು ಖಚಿತಪಡಿಸಿಕೊಳ್ಳಿ.

## 6. ಸೇವೆ ಮಾಡುವುದು!

ಕೊನೆಯದಾಗಿ, ಯೇಸು ಮಾಡಿದಂತೆ ನೀವು ಯಾವುದೇ ರೀತಿಯಲ್ಲಿ ಇತರರಿಗೆ ಸೇವೆ ಸಲ್ಲಿಸಲು ಲಭ್ಯವಿರಿ. ಸೇವೆ ಮಾಡುವುದಕ್ಕೆ ಅವಕಾಶಗಳಿಗೆ ಕೊನೆ ಇಲ್ಲ. ಆದರೆ ಮುಖ್ಯ ವಿಷಯವೇನೆಂದರೆ ಪರಸ್ಪರ ಕಷ್ಟಸುಖಗಳನ್ನು ಹಂಚಿಕೊಳ್ಳಲು ಮತ್ತು ದೇವರ ಮಕ್ಕಳಂತೆ ನಮ್ಮ ಕರೆಯುವಿಕೆಗಾಗಿ ಬದುಕಲು ಮಾರ್ಗಗಳನ್ನು ಕಂಡುಕೊಳ್ಳೋಣ.

★ ★ ★

**WANTED**

**PRINCIPAL**
**for**
**CHRISTIAN MATRICULATION SCHOOL**
**at**
**Chennai.**

We need well qualified, experienced, dedicated, hard working and mission oriented Christian.

Apply to :
E.mail: biblecor@yahoo.co.in
WhatsApp: (+91) 97908 05460

RNI NO. 70107/98, Postal Regn. No. TN/CH (C)/195/24-26 WPP NO. TN/PMG(CCR)/WPP-219/24-26

## Echo of His Call

**YouTube**
*Please subscribe*

Kindly view and subscribe our **Echo of His Call YouTube Channel** when you get time. Thanks. **- Editor**

## OUR BANK DETAILS:

### 1. Bank : State Bank of India

Branch : **Triplicane, Chennai-5**
Name : **S. Sam Selva Raj**
A/C No. : **1023 2934 679**
IFSC : **SBIN 00 00 249**
SWIFT CODE : **SBI NIN BB 455**

### 2. Bank : ICICI Bank

Branch : **Anna Salai, Chennai-6**
Name : **Echo of His Call**
A/C No. : **6038 0502 2319**
IFSC : **ICIC 000 6038**

### 3. Bank : State Bank of India

**(This Account is for Tax Exemption for Indians only )**

Branch : **Triplicane, Chennai-5**
Name : **Echo of His Call Educational Trust**
A/C No. : **1023 2923 805**
IFSC : **SBIN 00 00 249**

**Google Pay: 98410 71858**
**PayPal : SAM SELVA RAJ**
*****
**E.mail : sam@echoofhiscall.org**

# ECHO OF HIS CALL

Monthly magazines in 16 languages, Bible Colleges, Postal Courses, Church Planting, Village English High School, Gospel Printing Press, Crusades, Seminars, Social Services, etc.

Annual Subscription : Rs. 100/- Life Subscription : Rs. 2000/-

The multifarious activities of **Echo of His Call Ministries** are supported by the free-will offerings and donations of God's children like you. You may support **Echo of His Call** and its activities as the Lord leads you. We need your help to send forth the Gospel to the unreached people and plant Churches.

If you would like to receive **ECHO OF HIS CALL** magazines regularly, please write to us with your e.mail Id and Cell Phone number. Whenever you change your postal or e.mail addresses, please do inform us your old and new addresses.

**Echo of His Call** is available in 16 languages in our website also. You can read them by going into the site as well as downloading them and get blessed.

Your letters, prayer requests and your financial helps (**Money Orders, Cheques or Demand Drafts, NEFT, PayPal (Sam Selva Raj, sam@echoofhiscall.org) PhonePe (98410 71858), Gpay (98410 71858), Western Union, MoneyGram, etc.**) to **ECHO OF HIS CALL** may please be sent to the address below.

Please send your **Land Phone / Mobile Phone Numbers and E.mail addresses** for updation.

Our address :

**ECHO OF HIS CALL**
10, MOHAMMED ABDULLAH 2ND STREET, CHEPAUK, CHENNAI - 600 005, INDIA
PH: (+91-44) 2852 8282, 2852 9293, 2854 7766/ Cell: (+91) 98410 71852, 95661 31858 / E.mails: sam@echoofhiscall.org / biblecor@yahoo.co.in
Websites: www.echoofhiscall.org / www.stpaulsmatriculation.com

**YOU CAN SEND YOUR DONATION ONLINE ALSO**

**RNI NO. 70107/98**
**Postal Regn. No. TN/CH/(C)/195/24-26**
**WPP NO. TN/PMG(CCR)/WPP- 219/24-26**
**Date of Publication: Second week of every month**
**Date of Posting : 9th & 10th of every month**
**Posted at "Egmore RMS / 1 Patrika Channel"**
**on 11th** NOVEMBER 2024.
**If un-delivered please return to:**
**ECHO OF HIS CALL (KANNADA)**
**P.O. Box No. 2957,**
**Chepauk, Chennai - 600 005, INDIA.**
**Phone: (+ 91- 44) 2852 8282, 2852 9293, 2854 7766**

***JESUS LOVES YOU!***

**To**

*GOD BLESS YOU!*

Owned and published by **S. Sam Selva Raj** from New No. 8 & 10, Old No.18 & 19, Mohammed Abdullah 2nd Street, Chepauk, Chennai-600 005 and printed by **S. Sam Selva Raj** at **Echo of His Call Printers,** New No. 8 & 10, Old No.18 & 19, Mohammed Abdullah 2nd Street, Chepauk, Chennai-600 005. Editor: **S. Sam Selva Raj.**